
# ಕಾನನ

ಜೂನ್-2026

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

© ನಾಗೇಶ್ ಒ. ಎಸ್.

ಜೂನ್–2026

WCG
Wildlife Conservation Group

## ಲೇಖನಗಳು


* ಇತಿಹಾಸದ ಪುಟಗಳಲ್ಲಿ ವೃಕ್ಷಗಳ ಸಂರಕ್ಷಣೆ – ಜೆ. ಅಶೋಕ್ ಕುಮಾರ್
* ಗೀಜಗ ಹಕ್ಕಿ – ಪ್ರಕೃತಿಯ ನಿಪುಣ ಶಿಲ್ಪಿ – ಸನ್ನಿಧಿ. ವಿ.
* ನನ್ನೊಲವಿನ ಗುಲ್ ಮೊಹರ್ – ಮಂಜುಳಾ ರಾವ್
* ಮರಳು ತೀರದಿಂದ ನೀಲಿ ಸಾಗರವರೆಗೆ, ಆಮೆಗಳಿಗೆ ನಾವು ಅಗತ್ಯ – ಚತುರ್ವೇದ್ ಸೇಟ್
* ವನಬಂಧ – 13 – ಸುಬ್ಬು ಬಾದಲ್
* ಫವ್... ಅಂತು! (ವಿವಿ ಅಂಕಣ) – ಜೈಕುಮಾರ್ ಆರ್.
* ಬೀಜಾವತಾರ (ಕವನ) – ಕೆ. ಎಸ್. ಸುಮಂತ್ ಭಾರದ್ವಾಜ್
* ಪ್ರಕೃತಿ ಬಿಂಬ – ಅನಿಲ್ ಕುಮಾರ್ ಎನ್. ಆರ್.
  ದೀಪ್ತಿ ಎನ್.




ಮುಖಪುಟ ಛಾಯಾಚಿತ್ರ
ಗೀಜಗ

ಮುಖಪುಟ
ಕಾಂತರಾಜ್ ಡಿ.

ವಿನ್ಯಾಸ
ಧನರಾಜ್ ಎಂ.

© ಡಾ. ಪ್ರಭಾಕರ್ ತೀರ್ಥಹಳ್ಳಿ




# ಇತಿಹಾಸದ ಪುಟಗಳಲ್ಲಿ ವೃಕ್ಷಗಳ ಸಂರಕ್ಷಣೆ

ಮರಗಳು ನಮಗೆ ಪ್ರಕೃತಿ ಕೊಟ್ಟ ಬಹುದೊಡ್ಡ ಕೊಡುಗೆ. ಮರಗಳಿಲ್ಲದ ವಾತಾವರಣವನ್ನು ಊಹಿಸಲು ಕೂಡ ಸಾಧ್ಯವಿಲ್ಲ. ಇತ್ತೀಚೆಗೆ ಅಭಿವೃದ್ಧಿಯ ಹೆಸರಿನಲ್ಲಿ ಮರಗಳ ಮಾರಣಹೋಮ ನಡೆಯುತ್ತಿದೆ. ಪರಿಸರವಾದಿಗಳು ಇದಕ್ಕೆ ಬಹಳಷ್ಟು ವಿರೋಧ ವ್ಯಕ್ತಪಡಿಸುತ್ತಾರೆ. ಆದರೂ ಸರ್ಕಾರಗಳು ಕಿವುಡು ಕಪ್ಪೆಗಳ ರೀತಿ ಅವರು ಅಂದುಕೊಂಡಂತೆ ಕೆಲಸ ಮಾಡುತ್ತಿರುತ್ತಾರೆ. ಪ್ರತೀ ವರ್ಷ ಜೂನ್ 5ರಂದು ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಿ ಜಾಗೃತಿ ಮೂಡಿಸುವ ಕಾರ್ಯಗಳು ನಡೆಯುತ್ತಿವೆ. ಆಗ ಕೆಲವು ಘೋಷಣೆಗಳು ಕಿವಿಗೆ ಕೇಳಿಸುತ್ತವೆ. ದೊಡ್ಡ ದೊಡ್ಡ ಫಲಕಗಳು ಕಾಣಿಸುತ್ತವೆ. "ಕಾಡು ಉಳಿಸಿ ನಾಡು ಬೆಳಸಿ", "ಮನೆಗೊಂದು ಮರ ಊರಿಗೊಂದು ವನ", "ಕಾಡಿದ್ದರೆ ಮಳೆ, ಮಳೆ ಇದ್ದರೆ ಬೆಳೆ" ಮುಂತಾದ ಘೋಷಣೆಗಳು ಹೊರಬೀಳುತ್ತವೆ.

ಜೂನ್ 5ರ ನಂತರ ಘೋಷಣೆಗಳು ಮರೆಯಾಗುತ್ತವೆ. ಕಾಡು ನಮಗೆಲ್ಲಾ ಅತಿ ಅವಶ್ಯಕ. ಕಾಡು ಇದ್ದರೆ ನಮಗೆಲ್ಲಾ ನೆರಳು, ಹಣ್ಣು, ಉಸಿರಾಡಲು ಒಳ್ಳೆಯ ಗಾಳಿ ಸಿಗುತ್ತದೆ. ಇದಕ್ಕಿಂತ ಮುಖ್ಯವಾಗಿ ಮಳೆ ಹೊತ್ತ ಮೋಡಗಳನ್ನು ತಡೆದು ಮಳೆ ಸುರಿಸುತ್ತದೆ. ಇದರಿಂದ ಭೂಮಿ ಸಸ್ಯಶ್ಯಾಮಲೆಯಾಗಿ ಕಂಗೊಳಿಸುವಳು. ಎಲ್ಲಾ ಪ್ರಾಣಿ-ಪಕ್ಷಿಗಳಿಗೂ ಆಧಾರ ಆಗುವಳು. ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಕೆಲವೊಂದು ಕಾರಣಗಳಿಂದ ಮರಗಳನ್ನು ಕಡಿಯುವ ಪರಿಸ್ಥಿತಿ ಬರುತ್ತದೆ.

ಉದಾಹರಣೆ ಸುಗಮ ಸಂಚಾರಕ್ಕಾಗಿ ದೊಡ್ಡ ರಸ್ತೆಗಳನ್ನು ಮಾಡಬೇಕಾಗುತ್ತದೆ. ಅಥವಾ ಮೆಟ್ರೋ ಕಾಮಗಾರಿ ನಡೆಯುವಾಗ ಕಾಮಗಾರಿಗೆ ತೊಡಕಾಗುವ ಮರಗಳನ್ನು ಕಡಿಯಬೇಕಾಗುತ್ತದೆ. ಆಗ ಅಲ್ಲಿರುವ ಮರಗಳನ್ನು ಬೇರೆ ಕಡೆ ಸ್ಥಳಾಂತರ ಮಾಡಿದರೆ ಮರಗಳು ಉಳಿಯುತ್ತವೆ. ಮರಗಳನ್ನು ಸ್ಥಳಾಂತರಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳೆಂದರೆ, ಮರದ ಸುತ್ತ ಗುಂಡಿಯನ್ನು ತೋಡಿ ಬುಡಕ್ಕೆ ನೀರುಹಾಕಿ ಮಣ್ಣು ಸಡಿಲಗೊಳಿಸಿ ತಾಯಿಬೇರು ಸಮೇತ ಮರವನ್ನು ಮೇಲೆತ್ತಲಾಗುತ್ತದೆ. ಬೇರು ಒಣಗದಂತೆ ಸುರಕ್ಷಾ ಕ್ರಮ ವಹಿಸಲಾಗುತ್ತದೆ. ಅದನ್ನು ನೆಡಲು ತೋಡಿರುವ ಗುಂಡಿಗೆ ಮೊದಲೇ ನೀರುಣಿಸಿ, ಅಗತ್ಯ ಪೋಷಕಾಂಶ, ಕ್ರಿಮಿನಾಶಕ, ಗೊಬ್ಬರ ಹಾಕಿ ಬೇರು ಬೇಗ ನೆಲದಾಳಕ್ಕೆ ಇಳಿಯುವ ಸೂಕ್ತ ವಾತಾವರಣವನ್ನು ಸೃಷ್ಟಿಸಲಾಗುತ್ತದೆ. ನಂತರ ಕ್ರೇನ್ ಸಹಾಯದಿಂದ ಮರವನ್ನು ಗುಂಡಿಗೆ ಇಳಿಸಿ ನೆಡಲಾಗುತ್ತದೆ.




ಬೆಳೆದ ಮರಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸುವುದರಿಂದ ಹಲವಾರು ಪ್ರಯೋಜನಗಳಿವೆ. ರಸ್ತೆಬದಿ, ಉದ್ಯಾನ, ಕೆರೆ ಆವರಣದಲ್ಲಿ ಸಸಿ ನೆಟ್ಟು ಪೋಷಿಸಿ ಬೆಳೆಸಲು ದೀರ್ಘಾವಧಿ ಬೇಕಾಗುತ್ತದೆ. ರಸ್ತೆ ವಿಸ್ತರಣೆ ಅಥವಾ ಇನ್ನಿತರ ಕಾಮಗಾರಿಗೆ ಬಲಿಯಾಗುವ ಮರಗಳನ್ನು ಸ್ಥಳಾಂತರಿಸಿದರೆ ಅವು ಬದುಕುತ್ತವೆ. ಹೊಸ ಸಸಿನೆಟ್ಟು ಅಷ್ಟು ದೊಡ್ಡದಾಗಿ ಬೆಳೆಸಲು ಬೇಕಾಗುವ ಸಮಯ, ಶ್ರಮ ಉಳಿತಾಯವಾಗುತ್ತದೆ.

ಈ ರೀತಿ ಮರಗಳ ಸ್ಥಳಾಂತರವೊಂದು ವೃಕ್ಷ ಫೌಂಡೇಶನಿನ ವೃಕ್ಷತಜ್ಞ ವಿಜಯ್ ನಿಶಾಂತ್ ಮತ್ತು ಪರಿಸರ ಪ್ರೇಮಿ ಅಕ್ಷಯ್ ಹೆಬ್ಳೀಕರ್ ಸಹಕಾರದೊಂದಿಗೆ ಬೆಂಗಳೂರಿನಲ್ಲಿ ನಡೆಯಿತು. ಬೆಂಗಳೂರಿನ ವೈಟ್ ಫೀಲ್ಡ್ – ಐಟಿಪಿಎಲ್ ಬಳಿಯ ಸತ್ಯಸಾಯಿ ಆಸ್ಪತ್ರೆಯಿಂದ ವೈದೇಹಿ ಆಸ್ಪತ್ರೆವರೆಗಿನ ರಸ್ತೆಯ ಬದಿಗಳು ಮತ್ತು ನಡುವೆ ಬೆಳೆದು ನಿಂತಿದ್ದ ವಿವಿಧ ಬಗೆಯ

108 ಮರಗಳು ಮೆಟ್ರೋ ಕಾಮಗಾರಿಯ ಕೊಡಲಿ ಪೆಟ್ಟಿನಿಂದ ತಪ್ಪಿಸಿ ಸತ್ಯಸಾಯಿ ವೈದ್ಯಕೀಯ ಸಂಸ್ಥೆಯ ಆವರಣಕ್ಕೆ ಸ್ಥಳಾಂತರಗೊಂಡು ಚಿಗುರೊಡೆದು ಬೆಳೆದು ನಿಂತಿವೆ.

ಈ ಮರಗಳು ನಮ್ಮ ಮೆಟ್ರೋ ಎರಡನೇ ಹಂತದ ಕಾಮಗಾರಿಗೆ (ಬೈಯ್ಯಪ್ಪನಹಳ್ಳಿಯಿಂದ ವೈಟ್ ಫೀಲ್ಡ್ ವರಗೆ) ಬಲಿಯಾಗುತ್ತಿದ್ದವು. ಇದಕ್ಕಾಗಿ BMRC ರವರು ಬಿಬಿಎಂಪಿಯಿಂದ ಅನುಮತಿ ಪಡೆದಿದ್ದರು. ಮರಗಳಿಗೆ ಗುರುತು ಹಾಕಿದ್ದನ್ನು ಗಮನಿಸಿದ ಐಬಿಎಂ ಉದ್ಯೋಗಿಗಳಾದ ರಾಮ್ ಮತ್ತು ಸಿದ್ಧಾರ್ಥನಾಗ್ ಅವರು ಮರಗಳ ಸ್ಥಳಾಂತರಕ್ಕೆ ಬಿಬಿಎಂಪಿ ಅಧಿಕಾರಿಗಳ ಜೊತೆ ಚರ್ಚಿಸಿದರು. ಇದಕ್ಕೆ ಸಹಕಾರ ನೀಡುವುದಾಗಿ ಅಧಿಕಾರಿಗಳು ಭರವಸೆ ನೀಡಿದರು. ಇದಕ್ಕೆ ವೃಕ್ಷತಜ್ಞ ವಿಜಯ್ ನಿಶಾಂತ್ ಮತ್ತು ಪರಿಸರ ಪ್ರೇಮಿ ಅಕ್ಷಯ್ ಹೆಬ್ಳೀಕರ್ ನೆರವು ನೀಡಲು ಒಪ್ಪಿದರು. ಮರಗಳ ಮರುನಾಟಿ ಮಾಡಲು ಹಲವು ಸಂಸ್ಥೆಗಳಲ್ಲಿ ಅನುಮತಿ ಕೇಳಲಾಗಿತ್ತು. ಅನುಮತಿ ಸಿಕ್ಕಿರಲಿಲ್ಲ. ಸತ್ಯಸಾಯಿ ವೈದ್ಯಕೀಯ ಸಂಸ್ಥೆಯವರು ಆವರಣದಲ್ಲಿ ಸ್ಥಳ ನೀಡಲು ಒಪ್ಪಿದರು. 2017 ಡಿಸೆಂಬರ್ ತಿಂಗಳಲ್ಲಿ ಮರ ಸ್ಥಳಾಂತರ ಪ್ರಕ್ರಿಯೆ ನಡೆದಿತ್ತು. ವಿಜಯ್ ನಿಶಾಂತ್ ನೇತೃತ್ವದಲ್ಲಿ 115 ಮರಗಳ ಪೈಕಿ 108 ಮರಗಳನ್ನು ಸ್ಥಳಾಂತರ ಮಾಡಲಾಯಿತು. ನಿಶಾಂತ್ ಅವರು ಮರಗಳಿಗೆ ಸೋಂಕು ತಗುಲದಂತೆ ಶಿಲೀಂಧ್ರ ನಾಶಕಗಳು, ಇತರೆ ಔಷಧಗಳನ್ನು ಲೇಪಿಸಿ ಆರೈಕೆ ಮಾಡಿದ್ದರು. ಆಸ್ಪತ್ರೆಯ ಸಿಬ್ಬಂದಿ ನೀರು ಹಾಕಿ ಮರಗಳ ಪೋಷಣೆ ಮಾಡಿದರು. ಈಗ ಮರಗಳು ಸೊಂಪಾಗಿ ಬೆಳೆದು ಪರಿಸರ ಪ್ರೇಮಿಗಳ ಮನ ತಣಿಸುತ್ತಿವೆ (ಪ್ರಜಾವಾಣಿ 28 ಮೇ 2018).





ಪರಿಸರ ಕಾಳಜಿಯಿಂದ ಮರಗಳನ್ನು ನೆಡುವುದು, ಬೆಳೆದ ಮರಗಳನ್ನು ಯಶಸ್ವಿಯಾಗಿ ಬೇರೆ ಕಡೆ ಸ್ಥಳಾಂತರಿಸುವುದು ಇತ್ತೀಚೆಗೆ ಬಂದ ಪದ್ಧತಿಯೇನಲ್ಲ! ನಮ್ಮ ದೇಶವನ್ನು ಆಳಿದ ಕೆಲ ರಾಜರ ಚರಿತ್ರೆ ಓದಿದಾಗ ಈ ರೀತಿಯ ಕೆಲಸಗಳನ್ನು ಸಾವಿರಾರು ವರ್ಷದ ಹಿಂದೆ, ಹಲವು ಶತಮಾನಗಳ ಹಿಂದೆಯು ಸಹ ಮಾಡಿದ್ದಾರೆ. ಮೊದಲಿಗೆ ಮರಗಳ ನೆಡುವಿಕೆಯ ವಿಷಯ

ಬಂದಾಗ ನಮ್ಮ ಗಮನಕ್ಕೆ ಬರುವ ಹೆಸರು ಮೌರ್ಯಸಾಮ್ರಾಜ್ಯದ ದೊರೆ "ಅಶೋಕ ಚಕ್ರವರ್ತಿ". ಅಶೋಕ ಚಕ್ರವರ್ತಿಯು ರಸ್ತೆಯ ಇಕ್ಕೆಲಗಳಲ್ಲಿ ಸಸಿಗಳನ್ನು ನೆಡೆಸಿ ಅವುಗಳನ್ನು ಪೋಷಿಸಿ ನೋಡಿಕೊಳ್ಳಲು ಕೆಲವರನ್ನು ನೇಮಿಸಿದ್ದನು. ಅಷ್ಟೇ ಅಲ್ಲದೆ ತನ್ನ ರಾಜ್ಯದಲ್ಲಿ ಪ್ರಾಣಿಗಳನ್ನು ಬೇಟೆಯಾಡುವವರ ವಿರುದ್ಧ ಕ್ರಮಗಳನ್ನು ತೆಗೆದುಕೊಂಡ ದಾಖಲೆಗಳು ಇವೆ. ಮಾನವರಿಗೆ ಮಾತ್ರವಲ್ಲದೆ ಪ್ರಾಣಿಗಳಿಗೂ ಸಹ ದವಾಖಾನೆ ಕಟ್ಟಿಸಿದ್ದನು.




ಆದರೆ ಒಬ್ಬ ರಾಜನ ಹೆಸರು ಈ ವಿಷಯಕ್ಕೆ ತಳುಕು ಹಾಕಿದರೆ ಜನರು ಕಕ್ಕಾಬಿಕ್ಕಿಯಾಗುವರು. ಆ ಹೆಸರು ಯಾವುದು ಗೊತ್ತೇ? ಅವನೇ ಇತಿಹಾಸದಲ್ಲಿ ಹುಚ್ಚುದೊರೆ, ತಿಕ್ಕಲು ದೊರೆ ಎಂದು ಕುಖ್ಯಾತಿ ಪಡೆದಿರುವ "ಮೊಹಮ್ಮದ್-ಬಿನ್-ತುಘಲಕ್". ಇವನು ಬರುವುದು 14ನೇ ಶತಮಾನದಲ್ಲಿ ಆದರೆ 21ನೇ ಶತಮಾನದಲ್ಲಿ ಯಾವ ರಾಜಕಾರಣಿ ತಪ್ಪು ಮಾಡಿದರು "ತುಘಲಕ್ ದರ್ಬಾರ್" ಎಂದು ಆಡಿಕೊಳ್ಳುವರು. ಪಾಪ, ಅವನ ಆತ್ಮಕ್ಕೆ ಅದೆಷ್ಟು ನೋವಾಗಬೇಡ. ಇರಲಿ ಈಗ ವಿಷಯಕ್ಕೆ ಬರೋಣ. ಇವನಿಗೆ ವಿಶಾಲ ರಾಜ್ಯವಿದ್ದ ಕಾರಣ ದೆಹಲಿಯಲ್ಲಿ ಕುಳಿತು ಇಡೀ ಸಾಮ್ರಾಜ್ಯದ ಆಡಳಿತ ನೋಡಿಕೊಳ್ಳಲು ಕಷ್ಟವಾಗುತ್ತಿತ್ತು. ಅದರ ಬದಲು ಮಹಾರಾಷ್ಟ್ರದ ದೇವಗಿರಿಯನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿದರೆ ಸರಿಹೋಗುತ್ತದೆ ಎಂಬುದು ಅವನ ಯೋಜನೆ ಅದಕ್ಕೆ ದೌಲತಾಬಾದ್ ಎಂದು ದೇವಗಿರಿಯ ಹೆಸರನ್ನು ಬದಲಿಸಿದನು. ಯೋಜನೆ ಸರಿಯಾಗಿತ್ತು. ಆದರೆ ಅವನು ಮಾಡಿಕೊಂಡ ಎಡವಟ್ಟು ಅಂದರೆ ಕೇವಲ ಆಡಳಿತಯಂತ್ರವನ್ನು ವರ್ಗಾಯಿಸಲು ಹೋಗದೇ ದೆಹಲಿಯ ಸಮಸ್ತ ಜನರನ್ನು ಅವರ ಸಾಕುಪ್ರಾಣಿಗಳ ಜೊತೆಯಲ್ಲಿ ದೇವಗಿರಿಗೆ ಹೊರಡಲು ಆದೇಶವಿತ್ತನು. ಜನಗಳು ವಿಧಿಯಿಲ್ಲದೆ ದೆಹಲಿಯಿಂದ ದೇವಗಿರಿಗೆ ಬಂದರು. ಆಗ ಶತ್ರುಗಳು ದೆಹಲಿ ಮೇಲೆ ದಾಳಿ ಮಾಡಿದಾಗ ಪುನಃ ಜನಗಳಿಗೆ ದೆಹಲಿಗೆ ಹೋಗಲು ಹೇಳಿದನು. ಜನಗಳಿಗೆ ಈ ಯೋಜನೆಯಿಂದ ಅಪಾರ ಹಾನಿಯಾಯಿತು. ಅವನಿಗೆ ಹುಚ್ಚುದೊರೆ, ತಿಕ್ಕಲು ದೊರೆ ಎಂಬ ಬಿರುದುಗಳು ಸಿಕ್ಕವು. ಈ ಯೋಜನೆ ಸಂಪೂರ್ಣ ವಿಫಲವಾಯಿತು.

ಈ ಸಂಧರ್ಭದಲ್ಲಿ ನಮ್ಮ ಗಮನ ಸೆಳೆಯುವ ಪ್ರಮುಖ ವಿಷಯವೆಂದರೆ ಮರಗಳ ಸ್ಥಳಾಂತರ ಪ್ರಕ್ರಿಯೆ. ಇದರ ಅಧಿಕೃತ ದಾಖಲೆ "ಇಬ್ನಬತೂತಾ" ಎಂಬ ಪ್ರವಾಸಿಯ ಪ್ರವಾಸಿಕಥನದಿಂದ ತಿಳಿದುಬರುತ್ತದೆ. ಇವನು ತುಘಲಕ್ ಆಸ್ಥಾನಕ್ಕೆ ಭೇಟಿಕೊಟ್ಟಿದ್ದನು ಮತ್ತು ದೆಹಲಿಯಿಂದ ದೇವಗಿರಿ, ದೇವಗಿರಿಯಿಂದ ದೆಹಲಿ ವಿಫಲ ಯೋಜನೆಯ ಪ್ರತ್ಯಕ್ಷದರ್ಶಿಯಾಗಿದ್ದನು.




ಇವನ ಬರಹದ ಪ್ರಕಾರ ರಾಜನು ದಿಲ್ಲಿಯ ನಿವಾಸಿಗಳೆಲ್ಲ ಕೂಡಲೆ ದೇವಗಿರಿಗೆ ಹೊರಡಬೇಕೆಂದು ಆದೇಶ ನೀಡಿದನು. ಆದೇಶ ನೀಡುವ ಮೊದಲು ಜನಗಳು ನಡೆದುಕೊಂಡು ಹೋಗುವ ಹಾದಿಯಲ್ಲಿ ಎಲ್ಲಿ ಮರಗಳು ಇರುವುದಿಲ್ಲವೋ ಅಲ್ಲಿ ಪೂರ್ಣಬೆಳೆದ ಮರಗಳನ್ನು ನೆಡೆಸಿದ್ದನು. ಅವುಗಳನ್ನು ಈ ಉದ್ದೇಶಕ್ಕಾಗಿ ಬೇರೆ ಕಡೆಯಿಂದ ಕಿತ್ತು ತಂದು ನೆಡಲಾಗಿತ್ತು. (ಆಧಾರ: ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ ಪುಸ್ತಕ. ಪುಟಸಂಖ್ಯೆ 18). ಈಗ ಆಧುನಿಕ ಸಲಕರಣೆಗಳು ಬಂದಿವೆ. ಕ್ರೇನ್, ಜೆಸಿಬಿಗಳು ಇವೆ. ಇವು ಯಾವುವು ಇಲ್ಲದ ಕಾಲದಲ್ಲಿ ತುಘಲಕ್ ಕೇವಲ ಮಾನವ ಶಕ್ತಿಯನ್ನು ಬಳಸಿ ಮರಗಳ ಸ್ಥಳಾಂತರ ಮಾಡಿಸಿದ್ದು ಶ್ಲಾಘನೀಯ.

ಅವನು ಎಷ್ಟೇ ಎಡವಟ್ಟುಗಳು ಮಾಡಿರಲಿ ಅವನಿಂದ ಆದ ಒಳ್ಳೆಯ ಕಾರ್ಯವನ್ನು ಮೆಚ್ಚಬೇಕಾಗುತ್ತದೆ. ಇದೇ ರೀತಿ ಇತಿಹಾಸದಲ್ಲಿ ಆಗಿ ಹೋಗಿರುವ ಒಳ್ಳೆಯ ವಿಷಯಗಳನ್ನು ಹೊರತಂದು ಜನರ ಗಮನಕ್ಕೆ ತರಬೇಕಿದೆ. ಇತಿಹಾಸದಲ್ಲಿ ನಡೆದಿರುವ ಒಳ್ಳೆಯದನ್ನು ಎಲ್ಲರು ಮುಂದುವರೆಸಿಕೊಂಡು ಹೋಗುವಂತಾಗಬೇಕು. "ನಾವು ಇತಿಹಾಸವನ್ನು ಕೇವಲ ವಿಷಯವಾಗಿ ಅಧ್ಯಯನ ಮಾಡುತ್ತೇವೆ ಹೊರತು ಇತಿಹಾಸದಿಂದ ಪಾಠ ಕಲಿಯುವುದಿಲ್ಲ" - ಪೂರ್ಣಚಂದ್ರ ತೇಜಸ್ವಿ. ಈ ಮಾತನ್ನು ತೇಜಸ್ವಿಯವರು ಬಹಳ ನೋವಿನಿಂದ ಹೇಳಿದ್ದಾರೆ. ನಾವು ಸ್ವಲ್ಪವಾದರು ಇತಿಹಾಸದಿಂದ ಪಾಠ ಕಲಿತು ಒಳ್ಳೆಯದು ಮಾಡುವ ಕಡೆಗೆ ಗಮನಹರಿಸಬೇಕು.

**ಲೇಖನ: ಜೆ. ಅಶೋಕ್ ಕುಮಾರ್**

**ಚಿಕ್ಕಬಳ್ಳಾಪುರ ಜಿಲ್ಲೆ**




© ಧನರಾಜ್ ಎಂ.




# ಗೀಜಗ ಹಕ್ಕಿ – ಪ್ರಕೃತಿಯ ನಿಪುಣ ಶಿಲ್ಪಿ

ನೀರಿನ ತೀರದ ಸೊಬಗು ಎಂದರೆ ಕೇವಲ ಹರಿಯುವ ನದಿ, ಕೆರೆ ಅಥವಾ ಹಸಿರು ಮೈದಾನ ಮಾತ್ರವಲ್ಲ; ಅಲ್ಲಿ ಇರುವ ಜೀವಜಾಲವೇ ಅದಕ್ಕೆ ನಿಜವಾಗಿ ಜೀವ ತುಂಬುತ್ತದೆ. ಅಂತಹ ಜೀವಜಾಲದಲ್ಲಿ ಇತ್ತೀಚೆಗೆ ನಾನು ನೀರಿನ ತೀರದ ಬಳಿ ಕಂಡ ಒಂದು ಚಿಕ್ಕ ಹಕ್ಕಿ ನನ್ನ ಗಮನ ಸೆಳೆಯಿತು — ಅದು "ಗೀಜಗ ಹಕ್ಕಿ". ಕನ್ನಡದಲ್ಲಿ ಗೀಜಗ ಹಕ್ಕಿ ಎಂದು ಕರೆಯುವ ಈ ಪಕ್ಷಿಯನ್ನು ವೈಜ್ಞಾನಿಕವಾಗಿ ಪ್ಲೋಸಿಯಸ್ ಫಿಲಿಪಿನಸ್ (*Ploceus philippinus*) ಎಂದು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ಇದನ್ನು "Baya Weaver" ಎಂದು ಹೇಳುತ್ತಾರೆ. ಈ ಹಕ್ಕಿಯ ಗೂಡು ಕಟ್ಟುವ ಕಲೆ, ಅದರ ಸಾಮಾಜಿಕ ಜೀವನ, ಪ್ರಕೃತಿಯೊಂದಿಗಿನ ಹೊಂದಾಣಿಕೆ – ಇವೆಲ್ಲವೂ ನಿಜಕ್ಕೂ ಆಶ್ಚರ್ಯಕಾರಿಯಾಗಿವೆ.

## ನೀರಿನ ತೀರದಲ್ಲಿ ಕಂಡ ಆ ಅದ್ಭುತ ದೃಶ್ಯ

ಒಂದು ದಿನ ಬೆಳಿಗ್ಗೆ ನಾನು ಆನವಟ್ಟಿ ಎಂಬ ಊರಿನ ಸಮೀಪದ ಕೆರೆಯ ತೀರಕ್ಕೆ ತೆರಳಿದ್ದೆ. ಮಳೆಯ ನಂತರ ಕೆರೆ ತುಂಬಿ ಹರಿಯುತ್ತಿತ್ತು. ತೀರದ ಬಳಿ ತೆಂಗಿನ ಮರಗಳು, ಹೊಲಗಳು ಹಾಗೂ ಗಿಡಗಂಟೆಗಳು ಹಸಿರಿನಿಂದ ಕಂಗೊಳಿಸುತ್ತಿದ್ದವು. ಆಗಲೇ ನನ್ನ ಕಣ್ಣಿಗೆ ಬಿದ್ದವು – ಮರದ ಕೊಂಬೆಗಳಿಂದ ತೂಗುತ್ತಿದ್ದ ಅನೇಕ ಗೂಡುಗಳು! ಮೊದಲಿಗೆ ಅವು ಒಣ ಎಲೆಗಳ ಗುಚ್ಛವೆಂದು ಭಾವಿಸಿದ್ದೆ. ಆದರೆ ಹತ್ತಿರದಿಂದ ಗಮನಿಸಿದಾಗ ಅವು ಗೀಜಗ ಹಕ್ಕಿಯ ಕಲಾತ್ಮಕ ಗೂಡುಗಳು ಎಂದು ತಿಳಿಯಿತು. ಒಂದು ಕೊಂಬೆಗೆ ಐದು, ಆರು, ಕೆಲವೊಮ್ಮೆ ಹತ್ತಕ್ಕೂ ಹೆಚ್ಚು ಗೂಡುಗಳು ತೂಗುತ್ತಿದ್ದವು. ಪ್ರತಿಯೊಂದು ಗೂಡೂ ಕಂಬಳಿ ನೇಯ್ದಂತೆ ಕಾಣುತ್ತಿತ್ತು. ಗಾಳಿಯಲ್ಲಿ ಅವು ನಿಧಾನವಾಗಿ ಅಲುಗಾಡುತ್ತಿದ್ದವು. ಆ ದೃಶ್ಯ ನನಗೆ ಪ್ರಕೃತಿಯ ಕಲಾ ಪ್ರದರ್ಶನದಂತೆ ಅನಿಸಿತು.

## ಗೀಜಗ ಹಕ್ಕಿಯ ರೂಪರೇಖೆ




ಗೀಜಗ ಹಕ್ಕಿ ಸಾಮಾನ್ಯವಾಗಿ ಚಿಕ್ಕದಾದ ಹಕ್ಕಿ. ಗಂಡು ಹಕ್ಕಿ ಸಂಭೋಗ ಕಾಲದಲ್ಲಿ ತಲೆಯ ಭಾಗದಲ್ಲಿ ಹಳದಿ ಬಣ್ಣದ ಹೊಳಪನ್ನು ಹೊಂದುತ್ತದೆ. ದೇಹ ಕಂದು-ಬೂದು ಬಣ್ಣದ ಮಿಶ್ರಣವಾಗಿರುತ್ತದೆ. ಹೆಣ್ಣು ಹಕ್ಕಿ ಸ್ವಲ್ಪ ಮಂದ ಬಣ್ಣದಲ್ಲಿರುತ್ತದೆ. ಚಿಕ್ಕದಾದರೂ ಚುರುಕಾದ ಕಣ್ಣುಗಳು, ಬಲವಾದ ಚೂಪಾದ ಕೊಕ್ಕು ಇವುಗಳ ವೈಶಿಷ್ಟ್ಯ. ಈ ಹಕ್ಕಿಗಳು ಗುಂಪಾಗಿ ವಾಸಿಸುತ್ತವೆ. ಒಂದೇ ಮರದಲ್ಲಿ ಹಲವಾರು ಗೂಡುಗಳನ್ನು ಕಟ್ಟುವುದು ಅವುಗಳ ವಿಶೇಷತೆ. ನೀರಿನ ಸಮೀಪದ ಮರಗಳನ್ನು ಅವು ಆಯ್ಕೆಮಾಡುತ್ತವೆ—ಕಾರಣ: ಶತ್ರುಗಳಿಂದ ರಕ್ಷಣೆ ಹಾಗೂ ಆಹಾರದ ಲಭ್ಯತೆ.

## ಗೂಡು ಕಟ್ಟುವ ಅದ್ಭುತ ಕಲೆ




ಗೀಜಗ ಹಕ್ಕಿಯ ಗೂಡು ಕಟ್ಟುವ ಶೈಲಿ ವಿಶ್ವಪ್ರಸಿದ್ಧ. ಗಂಡು ಹಕ್ಕಿಯೇ ಗೂಡು ಕಟ್ಟುವ ಕೆಲಸವನ್ನು ಆರಂಭಿಸುತ್ತದೆ. ಒಣ ಹುಲ್ಲು, ಎಲೆಗಳ ನಾರುಗಳನ್ನು ಸಂಗ್ರಹಿಸಿ ಅವುಗಳನ್ನು ನೇಯ್ದಂತೆ ಜೋಡಿಸುತ್ತದೆ. ಮೊದಲು ಒಂದು ಉಂಗುರದಾಕಾರದ ಆಧಾರ ನಿರ್ಮಿಸುತ್ತದೆ. ನಂತರ ನಿಧಾನವಾಗಿ ಅದನ್ನು ದೊಡ್ಡ ಗೋಡೆಯಂತೆ ವಿಸ್ತರಿಸುತ್ತದೆ. ಗೂಡು ಅರ್ಧ ನಿರ್ಮಿಸಿದ ಮೇಲೆ ಹೆಣ್ಣು ಹಕ್ಕಿಯನ್ನು ಆಕರ್ಷಿಸಲು ಗಂಡು ಹಕ್ಕಿ ಹಾಡಲು ಆರಂಭಿಸುತ್ತದೆ. ಹೆಣ್ಣು ಹಕ್ಕಿ ಗೂಡನ್ನು ಪರಿಶೀಲಿಸಿ ತೃಪ್ತಿಯಾದರೆ ಮಾತ್ರ ಅದನ್ನು ಒಪ್ಪಿಕೊಳ್ಳುತ್ತದೆ. ಇಲ್ಲವಾದರೆ ಗಂಡು ಮತ್ತೆ ಹೊಸ ಗೂಡು ಕಟ್ಟಬೇಕಾಗುತ್ತದೆ. ಈ ಪ್ರಕ್ರಿಯೆ ಪ್ರಕೃತಿಯಲ್ಲಿನ ಶ್ರಮ ಮತ್ತು ಶ್ರದ್ಧೆಯ ಪ್ರತೀಕವಾಗಿದೆ.

ಗೂಡು ಸಾಮಾನ್ಯವಾಗಿ ಕೆಳಗೆ ಉದ್ದವಾದ ಕೊಳವೆ ರೀತಿಯ ಪ್ರವೇಶ ದ್ವಾರ ಹೊಂದಿರುತ್ತದೆ. ಇದರಿಂದ ಹಾವುಗಳು ಅಥವಾ ಇತರ ಶತ್ರುಗಳು ಒಳಗೆ ಪ್ರವೇಶಿಸಲು ಕಷ್ಟವಾಗುತ್ತದೆ. ನೀರಿನ ಮೇಲ್ಭಾಗದಲ್ಲಿ ಅಥವಾ ಕೆರೆಯ ಸಮೀಪ ಗೂಡು ಕಟ್ಟುವುದರಿಂದ ರಕ್ಷಣೆ ಹೆಚ್ಚಾಗುತ್ತದೆ.

## ನೀರಿನ ತೀರ – ಅವುಗಳ ಇಷ್ಟದ ವಾಸಸ್ಥಳ

ಗೀಜಗ ಹಕ್ಕಿಗಳು ಸಾಮಾನ್ಯವಾಗಿ ಕೆರೆ, ನದಿ, ಹೊಳೆಗಳ ಸಮೀಪದ ಮರಗಳಲ್ಲಿ ಗೂಡು ಕಟ್ಟುತ್ತವೆ. ಭತ್ತದ ಗದ್ದೆಗಳ ಬಳಿಯೂ ಇವು ಕಂಡುಬರುತ್ತವೆ. ನೀರಿನ ಪ್ರದೇಶಗಳಲ್ಲಿ ಕೀಟಗಳು ಹಾಗೂ ಬೀಜಗಳು ಸುಲಭವಾಗಿ ದೊರೆಯುತ್ತವೆ. ಹೀಗಾಗಿ ಆಹಾರಕ್ಕಾಗಿ ದೂರ ಪ್ರಯಾಣಿಸುವ ಅಗತ್ಯ ಕಡಿಮೆ. ನೀರಿನ ಸಮೀಪದ ಪರಿಸರದಲ್ಲಿ ಗಾಳಿ ಹೆಚ್ಚು ಬೀಸುತ್ತದೆ. ಗೂಡುಗಳು ಗಾಳಿಯಲ್ಲಿ ಅಲುಗಾಡುವುದರಿಂದ ಶತ್ರುಗಳು ಸಮೀಪಿಸಲು ಕಷ್ಟವಾಗುತ್ತದೆ. ಪ್ರಕೃತಿಯೊಂದಿಗೆ ಇಂತಹ ಸಮನ್ವಯ ಗೀಜಗ ಹಕ್ಕಿಯ ಬುದ್ಧಿಮತ್ತೆಯನ್ನು ತೋರಿಸುತ್ತದೆ.




## ಸಾಮಾಜಿಕ ಜೀವನ ಮತ್ತು ಸಹಕಾರ

ಗೀಜಗ ಹಕ್ಕಿಗಳು ಒಂಟಿಯಾಗಿ ಬದುಕುವುದಿಲ್ಲ. ಅವುಗಳ ಗುಂಪು ಜೀವನ ಗಮನಾರ್ಹ. ಒಂದೇ ಮರದಲ್ಲಿ ಅನೇಕ ಗೂಡುಗಳನ್ನು ಕಟ್ಟುವುದು ಸಹಜ. ಇದರಿಂದ ಪರಸ್ಪರ ಎಚ್ಚರಿಕೆ ನೀಡಲು ಸಾಧ್ಯ. ಒಂದು ಹಕ್ಕಿ ಅಪಾಯ ಕಂಡರೆ ಉಳಿದವರಿಗೆ ಸೂಚನೆ ನೀಡುತ್ತದೆ. ಈ ಗುಂಪು ಜೀವನ ಮಾನವನಿಗೆ ಸಹಕಾರದ ಪಾಠ ಕಲಿಸುತ್ತದೆ. “ಒಗ್ಗಟ್ಟಿನಲ್ಲಿ ಬಲ” ಎಂಬ ಮಾತಿನ ಜೀವಂತ ಉದಾಹರಣೆ ಗೀಜಗ ಹಕ್ಕಿಗಳು.

## ಪರಿಸರ ಸಂರಕ್ಷಣೆಯಲ್ಲಿ ಗೀಜಗ ಹಕ್ಕಿಯ ಪಾತ್ರ

ಗೀಜಗ ಹಕ್ಕಿಗಳು ಕೀಟಗಳನ್ನು ತಿನ್ನುವುದರಿಂದ ಕೃಷಿಗೆ ಸಹಾಯಕ. ಭತ್ತದ ಗದ್ದೆಗಳಲ್ಲಿ ಕಂಡುಬರುವ ಕೀಟಗಳನ್ನು ನಿಯಂತ್ರಿಸಲು ಅವು ಸಹಕರಿಸುತ್ತವೆ. ಹೀಗಾಗಿ ರೈತರಿಗೆ ಸಹಾಯಕ ಜೀವಿಗಳಾಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ನೀರಿನ ಪ್ರದೇಶಗಳ ನಾಶ, ಮರಗಳ ಕಡಿತ ಹಾಗೂ ನಗರೀಕರಣದಿಂದ ಗೀಜಗ ಹಕ್ಕಿಗಳ ವಾಸಸ್ಥಳ ಕಡಿಮೆಯಾಗುತ್ತಿದೆ. ಕೆರೆಗಳು ಒಣಗುತ್ತಿರುವುದು, ಎಲ್ಲೆಲ್ಲೂ ಪ್ಲಾಸ್ಟಿಕ್ ಕಸ ಹೆಚ್ಚಾಗುತ್ತಿರುವುದು, ರಾಸಾಯನಿಕಗಳಿಂದ ನೀರು ಕಲುಷಿತವಾಗುತ್ತಿರುವುದು—ಇವೆಲ್ಲವೂ ಪಕ್ಷಿಗಳ ಬದುಕಿಗೆ ಅಪಾಯವಾಗುತ್ತಿವೆ.

## ನನ್ನ ಮನದ ಅನಿಸಿಕೆ

ನೀರಿನ ತೀರದಲ್ಲಿ ಗೀಜಗ ಹಕ್ಕಿಯನ್ನು ಕಂಡ ಆ ಕ್ಷಣ ನನಗೆ ಜೀವನದ ಪಾಠ ಕಲಿಸಿತು. ಚಿಕ್ಕ ಜೀವಿಯೂ ತನ್ನ ಶ್ರಮದಿಂದ ಅಚ್ಚರಿ ಮೂಡಿಸಬಲ್ಲದು. ಗೂಡು ಕಟ್ಟುವಲ್ಲಿ ತೋರಿಸುವ ಸಹನೆ, ಶ್ರದ್ಧೆ ಮತ್ತು ಪರಿಶ್ರಮ—ಮಾನವನಿಗೂ ಆದರ್ಶ.

ಪ್ರಕೃತಿಯೊಂದಿಗೆ ಸಮನ್ವಯದಿಂದ ಬದುಕುವುದೇ ನಿಜವಾದ ಪ್ರಗತಿ ಎಂಬ ಸಂದೇಶ ಗೀಜಗ ಹಕ್ಕಿ ನೀಡುತ್ತದೆ. ನಾವು ಪರಿಸರವನ್ನು ರಕ್ಷಿಸಿದರೆ ಮಾತ್ರ ಇಂತಹ ಅದ್ಭುತ ದೃಶ್ಯಗಳನ್ನು ಮುಂದಿನ ಪೀಳಿಗೆಗಳು ನೋಡಲು ಸಾಧ್ಯ.



## ಸಂರಕ್ಷಣೆಯ ಅಗತ್ಯತೆ

ನಮ್ಮ ಊರು-ಕೇರಿಗಳಲ್ಲಿ, ನಗರಗಳಲ್ಲಿ ಕೆರೆಗಳನ್ನು ಉಳಿಸೋಣ. ಮರಗಳನ್ನು ಕಡಿಯದೇ, ಗಿಡಗಳನ್ನು ನೆಡುವ ಕಾರ್ಯಕ್ಕೆ ಮುಂದಾಗೋಣ. ಶಾಲಾ ಮಕ್ಕಳಿಗೆ ಪ್ರಕೃತಿ ಅಧ್ಯಯನ ಪ್ರವಾಸಗಳನ್ನು ಏರ್ಪಡಿಸೋಣ. ಹಕ್ಕಿಗಳ ಬಗ್ಗೆ ಅರಿವು ಮೂಡಿಸೋಣ. ಗೀಜಗ ಹಕ್ಕಿಯಂತಹ ಜೀವಿಗಳು ನಮ್ಮ ಪರಿಸರದ ಆಭರಣ. ಅವುಗಳಿಲ್ಲದ ಪ್ರಕೃತಿ ನಿರ್ಜೀವ.


ನೀರಿನ ತೀರದಲ್ಲಿ ಕಂಡ ಗೀಜಗ ಹಕ್ಕಿ ಕೇವಲ ಒಂದು ಹಕ್ಕಿ ಮಾತ್ರವಲ್ಲ; ಅದು ಪ್ರಕೃತಿಯ ಶಿಲ್ಪಿ, ಶ್ರಮದ ಪ್ರತೀಕ, ಸಹಕಾರದ ಸಂಕೇತ. ಅದರ ಗೂಡು ಕಟ್ಟುವ ಕಲೆ ನಮಗೆ ಆಶ್ಚರ್ಯ ನೀಡುತ್ತದೆ. ಪರಿಸರವನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮದು.

ಆದ್ದರಿಂದ ಪ್ರಕೃತಿಯ ಈ ಚಿಕ್ಕ ಶಿಲ್ಪಿಯನ್ನು ಉಳಿಸೋಣ, ಗೌರವಿಸೋಣ, ಸಂರಕ್ಷಿಸೋಣ. ಗೀಜಗ ಹಕ್ಕಿಯ ಗೂಡುಗಳಂತೆ ನಮ್ಮ ಬದುಕು ಕೂಡ ಶ್ರಮ, ಸಹಕಾರ ಮತ್ತು ಪ್ರಕೃತಿಯ ಪ್ರೀತಿಯಿಂದ ಕಟ್ಟಲ್ಪಡಲಿ.




**ಲೇಖನ: ಸನ್ನಿಧಿ. ವಿ.**

**ಉತ್ತರ ಕನ್ನಡ ಜಿಲ್ಲೆ**






# ನನ್ನೊಲವಿನ ಗುಲ್ ಮೊಹರ್

ದೂರದಿಂದಲೇ ತನ್ನಿರುವನ್ನು ತೋರುವ ಈ ಮರ ಪ್ರಕೃತಿಯ ಒಂದು ವಿಸ್ಮಯವೇ ಸರಿ. ನಮ್ಮ ನಾಡಿನ ಮರವಲ್ಲದಿದ್ದರೂ ಇಂದು ಅದು ನಮ್ಮದೇ ಮರವಾಗಿಬಿಟ್ಟಿದೆ. ಬೆಂಗಳೂರಿನ ತುಂಬೆಲ್ಲಾ ಈ ಮರದ್ದೇ ಕಾರುಬಾರು. ನಮ್ಮ ವಿಧಾನಸೌಧ, ಎಂ. ಜಿ. ರೋಡ್, ವಿಲ್ಸನ್ ಗಾರ್ಡನ್, ಕೋರಮಂಗಲ, ಹೆಚ್. ಎಸ್. ಆರ್. ಸರ್ಜಾಪುರದ ರಸ್ತೆಯ ಇಕ್ಕೆಲಗಳಲ್ಲಿ ಮೈ ಚಾಚಿ ನಿಂತಿಹ ಈ ಮರ ಸೊಬಗು ಬಣ್ಣಿಸಲು ಅಸದಳ.




ದೂರದ ಮಡಗಾಸ್ಕರ್ ದಾಟಿ ಬಂದಿರುವ ಈ ಗುಲ್ ಮೊಹರ್ ಎಂಬ ಹೆಸರು ಪರ್ಷಿಯನ್ ಮೂಲದ್ದು (ಗುಲ್ – ಹೂ; ಮೊಹರ್ – ಮುದ್ರೆ/ಚಿಹ್ನೆ). ಇದರ ಕಂಗೊಳಿಸುವ ಹೂಗಳು ಪ್ರಕೃತಿಯ ಅದ್ಭುತ ಮುದ್ರೆಯಂತೆ ಕಾಣುವುದರಿಂದ 3ಈ ಹೆಸರು ಬಂದಿರಬಹುದು. ಬೇಸಿಗೆಯ ಸಮಯ, ರಣರಣ ಬಿಸಿಲು ಸುಡುವ ಹೊತ್ತಿನಲ್ಲಿ ಮರದ ತುಂಬ ಸೊಂಪಾದ ಚಿಗುರು ಎಲೆಗಳು, ಆ ಹಸಿರಿಗೆ ರಮಣೀಯವಾಗಿ ಹೊಂದುವ ರಕ್ತವರ್ಣದ ಪಕಳೆಗಳಲ್ಲಿ ಕಲಾವಿದನೊಬ್ಬ ಅಲ್ಲಲ್ಲೇ ಬಣ್ಣದ ಸಿಂಚನ ಮಾಡಿಸಿದಂತೆ ಬಿಳಿಯ ಅಥವಾ ಹಳದಿಯ ಮಿಶ್ರಣವಾದ ಹೂಗಳು. ಓಹ್! ಅದ್ಭುತ ದೃಶ್ಯ.







ಹೇಳಲು ಮರೆತೆ, ಕನ್ನಡದಲ್ಲಿ ಈ ಮರವನ್ನು ಕತ್ತಿಕಾಯಿ ಮರವೆನ್ನುತ್ತಾರೆ. ಇದರ ಕಾಯಿಗಳು ಕತ್ತಿಯಂತೆ ಕಾಣುವ ಕಾರಣವಿರಬಹುದು. ಬೆಂಗಾಲಿ ಮತ್ತು ಒರಿಯಾದಲ್ಲಿ ಕೃಷ್ಣ ಚೂಡಾ (ಕೃಷ್ಣನ ಕಿರೀಟ) ಎಂದು ಕರೆಯುತ್ತಾರೆ. ಇದರ ಎಲೆಗಳು, ಹೂಗಳು ಎಷ್ಟು ಮೃದುವೋ ಅಷ್ಟೇ ಗಡಸು ಇದರ ಕಾಯಿ. ಒಮ್ಮೊಮ್ಮೆ ಹೂವಿನ ಮೃದುತ್ವಕ್ಕೂ ಕಾಯಿಯ ಗಡಸುತನಕ್ಕೂ ಇರುವ ಅಂತರವೇ ಬದುಕಿನ ಪಾಠ ಎನಿಸುತ್ತದೆ. ಇದರೊಳಗಿನ ಬೀಜವೂ ಸಹ. ಬಣ್ಣವಾಗಲಿ ಅಥವಾ ಗಡಸುತನವಾಗಲಿ ಹೂಗಿಂತ ಎಷ್ಟು ವಿಭಿನ್ನ. ಬೀಜಗಳು ಒಟ್ಟಿಗಿರುವಾಗ ಮಾಡುವ ನಿನಾದ ಬಹಳ ಮಧುರ.




ನಾನು ಕೆಲಸ ಮಾಡುವ ಶಾಲೆಯ ಆವರಣದಲ್ಲಿ ಕಾಲಿಟ್ಟೊಡನೆ ಕಾಣುವ ಮೊದಲ ಮರವೆಂದರೆ ಗುಲ್ ಮೊಹರ್, ನನ್ನ ಕಣ್ಣುಗಳು ತನ್ನಂತಾನೆ ಇದರತ್ತ ಹೊರಳುತ್ತದೆ. ತೆಳು ಮುಗುಳುನಗೆಯೊಂದಿಗೆ ನಮ್ಮಿಬ್ಬರ ಸಂಭಾಷಣೆ ನಡೆಯುತ್ತದೆ. ನಾನು ಕೆಲವೊಮ್ಮೆ ಬೇಸಿಗೆಯ ರಜೆಯಲ್ಲೂ ಶಾಲೆಗೆ ಹೋಗುವುದು ಈ ಮರವನ್ನು ಭೇಟಿಮಾಡಲು. ನನ್ನ ಮನೆಯ ಗೇಟಿನ ಬಳಿಯೂ ಇದೇ ಮರವಿದೆ. ಬೇಸಿಗೆಯಿಡೀ ಬಿಸಿಲೊಂದಿಗೆ ಸ್ಪರ್ಧಿಸುತ್ತಾ, ನಗುನಗುತ್ತಾ ಅರಳುತ್ತದೆ. ಇದನ್ನು ನೋಡುತ್ತಾ ಮೈಮರೆತ ಕ್ಷಣಗಳು ಅದೆಷ್ಟೋ. ಚಿಕ್ಕ ಮಗುವಿನಂತೆ ಈ ಮರದ ಮುಂದೆ ನಿಂತೇ ಇರುತ್ತೇನೆ.



ಹೇ ಗೆಳತಿ, ಅರಿಯೆ ನೀ ಯಾರು, ಎಲ್ಲಿಂದ ಬಂದಿರುವೆಯೆಂದು
ನೀ ಯಾರಾದರೇನು, ತಿಳಿಯುವ ಅಗತ್ಯವು ನನಗೆಲ್ಲಿಯದು
ನನ್ನ ನಿನ್ನ ನಡುವಿನಲಿ ಹರಿಯುತಿಹ ಬಂಧವೆಂತಹುದು
ನಿನ್ನ ಪುಟ್ಟ ನೋಟ, ಉಕ್ಕಿಸುವುದು ಪ್ರೀತಿಯ ಸೆಲೆಯನು
ವಸಂತನ ಆಗಮನಕ್ಕಾಗಿ ಹಾತೊರೆಯುವ ನಿನ್ನೊಲವು
ನನಗೆ ತಿಳಿಯದೆ ನಿನ್ನಅಂತರಂಗ, ಬಲ್ಲೆ ನಾನು ಎಲ್ಲವ,
ನಿನ್ನ ಈ ಸೊಬಗು, ಬಿನ್ನಾಣ, ಸಿಂಗಾರದ ಆರಾಧಕಿ ನಾನು
ಪ್ರತಿ ಬೇಸಿಗೆಯಲ್ಲೂ ಉಸಿರಹಿಡಿದು ಕಾಯುವೆ ನಿನಗಾಗಿ ನಾನು
ಆಡದೆಯೇ ನುಡಿದಿದೆ ನೂರೆಂಟು ಮಾತ ಆ ನಿನ್ನ ಕುಡಿ ನೋಟ
ಸಾಕು ನನಗೆ ಹೃದಯ ತುಂಬುತಿಹ ನಿನ್ನ ಈ ಒಂದು ನೋಟ




**ಲೇಖನ: ಮಂಜುಳಾ ರಾವ್**

**ಬೆಂಗಳೂರು ಜಿಲ್ಲೆ**




# ಮರಳು ತೀರದಿಂದ ನೀಲಿ ಸಾಗರವರೆಗೆ, ಆಮೆಗಳಿಗೆ ನಾವು ಅಗತ್ಯ

ಕಡಲಾಮೆಗಳು ಸಮುದ್ರದ ಸುಂದರ ಸರೀಸೃಪಗಳಾಗಿದ್ದು, *ಟೆಸ್ಟುಡೈನ್ಸ್* (Testudines) ವರ್ಗಕ್ಕೆ ಸೇರಿವೆ. ಇವು ಭೂಮಿಯಲ್ಲಿನ ಅತ್ಯಂತ ಪುರಾತನ ಸಮುದ್ರ ಜೀವಿಗಳಲ್ಲಿ ಒಂದಾಗಿದ್ದು, ಸುಮಾರು 100 ಮಿಲಿಯನ್ ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಜೀವಿಸುತ್ತಿವೆ. ಈ ಅದ್ಭುತ ಜೀವಿಗಳು ಸಮುದ್ರ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಆದರೆ ಇಂದು ವಾಸಸ್ಥಳ ನಾಶ, ಪ್ಲಾಸ್ಟಿಕ್ ಮಾಲಿನ್ಯ, ಹವಾಮಾನ ಬದಲಾವಣೆ ಮತ್ತು ಮೀನುಗಾರಿಕಾ ಬಲೆಗೆ ಸಿಲುಕುವಂತಹ ಅನೇಕ ಅಪಾಯಗಳನ್ನು ಎದುರಿಸುತ್ತಿವೆ. ಕಡಲಾಮೆಗಳ ಸಂರಕ್ಷಣೆಯ ಮಹತ್ವವನ್ನು ಜಾಗೃತಿಗೊಳಿಸಲು ಪ್ರತಿ ವರ್ಷ ಜೂನ್ 16 ರಂದು *ವಿಶ್ವ ಕಡಲಾಮೆ ದಿನ* ಆಚರಿಸಲಾಗುತ್ತದೆ.

ಪ್ರಪಂಚದಲ್ಲಿ ಒಟ್ಟು ಏಳು ಪ್ರಮುಖ ಕಡಲಾಮೆ ಪ್ರಭೇದಗಳಿವೆ – ಗ್ರೀನ್ ಟರ್ಟಲ್, ಲಾಗರ್‌ಹೆಡ್ ಟರ್ಟಲ್, ಹಾಕ್ಸ್‌ಬಿಲ್ ಟರ್ಟಲ್, ಲೆದರ್‌ಬ್ಯಾಕ್ ಟರ್ಟಲ್, ಕೆಂಪ್'ಸ್ ರಿಡ್ಲಿ ಟರ್ಟಲ್, ಆಲಿವ್ ರಿಡ್ಲಿ ಟರ್ಟಲ್ ಮತ್ತು ಫ್ಲಾಟ್‌ಬ್ಯಾಕ್ ಟರ್ಟಲ್. ಭಾರತದ ವಿಶಾಲ ಕಡಲತೀರವು ಈ ಏಳು ಪ್ರಭೇದಗಳಲ್ಲಿ ಐದು ಪ್ರಭೇದಗಳಿಗೆ ವಾಸಸ್ಥಳ ಒದಗಿಸುತ್ತಿದ್ದು, ಕಡಲಾಮೆಗಳ ಸಂರಕ್ಷಣೆಯಲ್ಲಿ ಭಾರತ ಪ್ರಮುಖ ಸ್ಥಾನ ಹೊಂದಿದೆ.

ಇವುಗಳಲ್ಲಿ *ಆಲಿವ್ ರಿಡ್ಲಿ ಆಮೆಗಳು* **"ಅರಿಬಡಾ"** ಎಂದು ಕರೆಯುವ ಸಾಮೂಹಿಕ ಮೊಟ್ಟೆ ಇಡುವ ವಿಶೇಷ ವರ್ತನೆಗಾಗಿ ಪ್ರಸಿದ್ಧಿಯಾಗಿವೆ. ಒಡಿಶಾದ ಗಹಿರ್ಮಾಥಾ ಮೆರೈನ್ ಸಂರಕ್ಷಣಾ ಪ್ರದೇಶವು ಆಲಿವ್ ರಿಡ್ಲಿ ಆಮೆಗಳ ವಿಶ್ವದ ಅತಿದೊಡ್ಡ ಮೊಟ್ಟೆ ಇಡುವ ತಾಣವೆಂದು ಪ್ರಸಿದ್ಧಿಯಾಗಿದೆ. ಪ್ರತಿವರ್ಷ ಸಾವಿರಾರು ಹೆಣ್ಣು ಆಮೆಗಳು ಇಲ್ಲಿ ಬಂದು ಮರಳಿನ ತೀರದಲ್ಲಿ ಮೊಟ್ಟೆ ಇಡುತ್ತವೆ. ಕಡಲಾಮೆಗಳು ಹೆಚ್ಚು ದೂರ ವಲಸೆ

ಹೋಗುವುದರಲ್ಲಿಯೂ ಪ್ರಸಿದ್ಧಿಯಾಗಿವೆ. ಆಹಾರ ಪಡೆಯುತ್ತಿರುವ ಪ್ರದೇಶಗಳಿಂದ ಮೊಟ್ಟೆ ಇಡುವ ತೀರಗಳವರೆಗೆ ಸಾವಿರಾರು ಕಿಲೋಮೀಟರ್‌ಗಳಷ್ಟು ದೂರ ಪ್ರಯಾಣಿಸುತ್ತವೆ. ಇವು ಪ್ರವಾಳ ಭಿತ್ತಿಗಳನ್ನು ರಕ್ಷಿಸುವುದು, ಜೆಲ್ಲಿ ಮೀನುಗಳ ಸಂಖ್ಯೆಯನ್ನು ನಿಯಂತ್ರಿಸುವುದು ಹಾಗೂ ಸಮುದ್ರ ಹುಲ್ಲಿನ ಪ್ರದೇಶಗಳನ್ನು ಕಾಪಾಡುವ ಮೂಲಕ ಸಮುದ್ರ ಪರಿಸರದ ಸಮತೋಲನವನ್ನು ಉಳಿಸುತ್ತವೆ.

## ನನ್ನನ್ನು ಪ್ರೇರೇಪಿಸಿದ ಒಂದು ವೈಯಕ್ತಿಕ ಅನುಭವ




ಬಾಲ್ಯದಿಂದಲೂ ನನಗೆ ವನ್ಯಜೀವಿಗಳ ಹಾಗೂ ಅವುಗಳ ವೈಶಿಷ್ಟ್ಯಗಳ ಬಗ್ಗೆ ವಿಶೇಷ ಆಸಕ್ತಿ ಇತ್ತು. ಮೇ 2024ರಲ್ಲಿ ಕರ್ನಾಟಕದ ಅರಬ್ಬೀ ಸಮುದ್ರ ತೀರದಲ್ಲಿ ಆಮೆ ಮರಿಗಳನ್ನು ಸಮುದ್ರಕ್ಕೆ ಬಿಡುವ ಕಾರ್ಯದಲ್ಲಿ ಭಾಗವಹಿಸುವ ಅಪರೂಪದ ಅವಕಾಶ ನನಗೆ ದೊರೆಯಿತು. ಪುಟ್ಟ ಆಮೆ ಮರಿಗಳು ತಮ್ಮ ಸಹಜ ಪ್ರೇರಣೆಯಿಂದ ಸಮುದ್ರದತ್ತ ನಿಧಾನವಾಗಿ ಸಾಗುತ್ತಿರುವ ದೃಶ್ಯ ಮನಸ್ಸಿಗೆ ತುಂಬಾ ಸ್ಪರ್ಶಿಸಿದಂತೆಯೂ ಪ್ರೇರಣಾದಾಯಕವಾಗಿಯೂ ಅನುಭವವಾಯಿತು. ಅವುಗಳ ಬದುಕಿನ ಹೋರಾಟ ಎಷ್ಟು ಸೂಕ್ಷ್ಮವಾಗಿದ್ದರೂ ಅಷ್ಟೇ ದೃಢವಾಗಿದೆಯೆಂಬುದನ್ನು ಅದು ನನಗೆ ನೆನಪಿಸಿತು.

ಆ ಅನುಭವವು ಸಮುದ್ರ ಸಂರಕ್ಷಣೆಯ ಮಹತ್ವವನ್ನು ಇನ್ನಷ್ಟು ಆಳವಾಗಿ ಅರಿಯುವಂತೆ ಮಾಡಿತು. ಮೊಟ್ಟೆ ಇಡುವ ತೀರಗಳನ್ನು ರಕ್ಷಿಸುವುದು, ಮಾಲಿನ್ಯವನ್ನು ಕಡಿಮೆ ಮಾಡುವುದು ಹಾಗೂ ಭವಿಷ್ಯದ ಪೀಳಿಗೆಗಳಿಗೆ ಸುರಕ್ಷಿತ ಸಮುದ್ರವನ್ನು ಉಳಿಸುವ ಅಗತ್ಯತೆಯನ್ನು ಮತ್ತಷ್ಟು ಬಲಪಡಿಸಿತು.


ಇಂದಿಗೂ ಕಡಲಾಮೆಗಳು ಕಡಲತೀರಗಳ ಅವೈಜ್ಞಾನಿಕ ಅಭಿವೃದ್ಧಿ, ಸಮುದ್ರದ ಕಸ, ಮೀನುಗಾರಿಕಾ ಬಲೆಗಳಲ್ಲಿ ಸಿಲುಕುವುದು ಹಾಗೂ ಹವಾಮಾನ ಬದಲಾವಣೆಗಳಿಂದ ಅಪಾಯವನ್ನು ಎದುರಿಸುತ್ತಿವೆ. ಕಡಲಾಮೆಗಳ ಸಂರಕ್ಷಣೆ ಎಂದರೆ ಕೇವಲ ಒಂದು ಜೀವಿಯನ್ನು ಉಳಿಸುವುದಲ್ಲ, ನಮ್ಮ ಸಮುದ್ರಗಳ ಆರೋಗ್ಯವನ್ನು ಕಾಪಾಡುವುದಾಗಿದೆ.

ವಿಶ್ವ ಕಡಲಾಮೆ ದಿನವು ಪ್ರತಿಯೊಬ್ಬರ ಸಣ್ಣ ಪ್ರಯತ್ನವೂ ಮಹತ್ವದ್ದೆಂದು ನಮಗೆ ನೆನಪಿಸುತ್ತದೆ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದರಿಂದ, ಕಡಲತೀರಗಳನ್ನು ಸಂರಕ್ಷಿಸುವುದರಿಂದ ಹಾಗೂ ಜಾಗೃತಿ ಮೂಡಿಸುವುದರಿಂದ ಈ ಪುರಾತನ ಸಮುದ್ರ ಯಾತ್ರಿಕರಿಗೆ ಸುರಕ್ಷಿತ ಭವಿಷ್ಯವನ್ನು ನಾವು ನಿರ್ಮಿಸಬಹುದು.

**ಲೇಖನ: ಚತುರ್ವೇದ್ ಸೇಟ್**

**ಬೆಂಗಳೂರು ಜಿಲ್ಲೆ**

# ವನಬಂಧ –13



## ಎಡದಿಂದ ಬಲಕ್ಕೆ

1. ರಾಟೆಯೂ ಇಲ್ಲ ಹವಳವೂ ಇಲ್ಲ ಆದರೆ ಚಂದದ ಪುಟ್ಟ ಪಕ್ಷಿ (4)
2. ಈ ಬೆನ್ನುಮೂಳೆಯ ಜೀವಿಗಳಿಗೂ ಶೇರು ವ್ಯವಹಾರಕ್ಕೂ ಸಂಬಂಧವಿಲ್ಲ (4)
3. ಗೌಜು ಗದ್ದಲ ಮಾಡುವುದೇ ಈ ಹಕ್ಕಿಗಳ ಕೆಲಸ (5)
4. ಒಂಬತ್ತು ಬಣ್ಣಗಳ ಸುಂದರಾಂಗ ಪಕ್ಷಿ (4)
5. ಈ ಹಕ್ಕಿ ಹಾವಿನಂತೆ ಬಾಗಿ ಬಳುಕಿದರೂ ತಿನ್ನುವುದು ಮಾತ್ರ ಮೀನುಗಳನ್ನು (3)
7. ಹಾರಾಟಕ್ಕೆ ಹೋಗಿ ಬರಲು ಕೆಂಪು ಬಣ್ಣ ಬೇಕೇ ಬೇಕು (4)
8. ಬೇಟೆಯಾಡುವ ವರ ಇಲ್ಲ ಈ ಹಕ್ಕಿಗೆ (4)
9. ಎಲ್ಲ ಜಾತಿಯ ಸಸ್ಯಗಳಿಗೆ ಇರುವ ಮೂಲ ಅಂಗ (2)

**ಮೇಲಿನಿಂದ ಕೆಳಕ್ಕೆ**

1. ಗುಟುರು ಹಾಕುವುದೇ ಈ ಸಸ್ತನಿಯ ಗುಣ (3)
2. ಕಳೆಗುಂದಿದ ಮಂಗ ಅಲ್ಲ, ಆದರೆ ಸುಂದರ ಪಕ್ಷಿ (3)
3. ಕೆರೆಗಳಲ್ಲಿ ತಾವರೆ ಗಿಡದ ಎಲೆಗಳ ಮೇಲೆ ನಡೆವ ಈ ಹಕ್ಕಿ ಯಾವಾಗಲೂ ಜತನದಿಂದ ವರ್ತಿಸುತ್ತದೆ. (3)
4. ಗದ್ದೆಯಲ್ಲಿ ಗೊರ ಗೊರ ಸದ್ದು ಮಾಡುವ ಕಂದು ಬಿಳಿ ಬಣ್ಣದ ಪಕ್ಷಿ (5)
5. ಪಕ್ಷಿಗಳ ಈ ಮೂಲಗುಣ ವಿಮಾನಕ್ಕೂ ಇದೆ (3)
6. ಕನಕಾಂಬರ ಅಲ್ಲ, ಆಕಾಶ (3)
7. ತಾವರೆ ಹೂವಿನ ಮುಖ ಕೆಂಪಾಗಿ ಅರಳಿದೆ (4)
8. ಪ್ರಾಣಿಗಳು ಆಹಾರಕ್ಕಾಗಿ ಕೊಲ್ಲುವ ಈ ಕೆಲಸ ತಲೆ ಕೆಳಗಾಗಿದೆ. (2)

**ಕಾನನ ವನಬಂಧ - 12 (ಮೇ - 2026) ಉತ್ತರಗಳು:**

**ಎಡದಿಂದ ಬಲಕ್ಕೆ**

1. ಚಂಡಮಾರುತ 2. ಕಿರುಬ 3. ಕಡವೆ 4. ಇದ್ದಿಲು 5. ಕೆಂಜಿಗ 6. ಕಾಡುಕುರಿ 7. ಚಾವಟಿ 8. ಕರಟ

**ಮೇಲಿನಿಂದ ಕೆಳಕ್ಕೆ**

1. ಯಡಕುಮರಿ 2. ಕಿರಾತಕ 3. ಬಕಪಕ್ಷಿ 4. ಇರುವೆ 5. ಕೆಂದಳಿಲು 6. ಕಾಟಿ 7. ಚಾತಕ 8. ಕುದುರೆ

**ವನಬಂಧ: ಸುಬ್ಬು ಬಾದಲ್**
**ಬೆಂಗಳೂರು ಜಿಲ್ಲೆ**






ವಿವಿ ಅಂಕಣ

# ಘಮ್… ಅಂತು!

ಆ ದಿನ ಗುರುವಾರ. ನಾನು ವಾರಕ್ಕೊಮ್ಮೆ ನಡೆಯುವ ಫುಟ್ ಬಾಲ್ ಪಂದ್ಯ ಮುಗಿಸಿ ಮನೆಗೆ ಸುಮಾರು ರಾತ್ರಿ 9 ಘಂಟೆಗೆ ಬರುವ ಸಮಯ. ಎಂದಿನಂತೆ ಅಂದೂ ಸಹ ನನ್ನ ಆಟ ಮುಗಿಸಿ ಸುಸ್ತಾಗಿ, ಹಸಿದ ಹುಲಿಯಂತೆ ಮನೆಯ ಗೇಟನ್ನು ತೆಗೆದೆ. ಸುಸ್ತಾಗಿದ್ದರಿಂದ ಬೇರೆ ಕಡೆ ನೋಡಿ ಗಮನ ಹರಿಸುವ ಯಾವ ಇರಾದೆಯೂ ಇರಲಿಲ್ಲ. ಆದ್ದರಿಂದ ಚಪ್ಪಲಿ ಬಿಟ್ಟು ನನ್ನ ರೂಮಿಗೆ ಹೋಗುವ ಭರದಲ್ಲಿದ್ದೆ. ಮೆಟ್ಟಿಲುಗಳನ್ನು ಹತ್ತುವಾಗ *'ಘಮ್... ಅಂತು'* ಯಾವುದೋ ಕಾಣದ ಸುವಾಸನೆಯ ಗಾಳಿ 'ಹೇ ನಿಲ್ಲು' ಎಂದಂತಾಯಿತು. ನಿಂತೆ; ಇಲ್ಲೆ ಇಲ್ಲೆ ಎಲ್ಲೋ… ಹಲಸಿನ ಹಣ್ಣು ಮಾಗಿ, ಹಣ್ಣಾಗಿ ತನ್ನ ಸುವಾಸನೆಯನ್ನು ಗಾಳಿಯೆಂಬ ಅಂಚೆಯ ಮೂಲಕ ನನ್ನ ಮೂಗಿಗೆ ಹರಿಸಿ, ನನ್ನನ್ನು ಕರೆದಂತೆ ಭಾಸವಾಯಿತು. ತಿರುಗಿ ನೋಡಿದರೆ, ಮನೆ ಬಾಗಿಲ ಮುಂದೆಯೇ ಒಂದು ಸೊಗಸಾದ ಹಲಸಿನ ಹಣ್ಣು ಮಲಗಿದೆ. ಅದನ್ನು ಕಂಡ ನಂತರ ಹಸಿದ ಆ ಹೊಟ್ಟೆಗೆ ಮೆದುಳು ಹೀಗೆ ಟೀಕಿಸುತ್ತಿದೆ, 'ನೋಡು ಜೀ… ಎಷ್ಟು ಚೆನ್ನಾಗಿ ಘಮ್… ಅಂತಿದೆ. ನಿನ್ನ ಹಸಿವಿಗೆ ಇದೇ ರಾಮಬಾಣ. ನೆನಪಿಸಿಕೋ, ಆ ದಿನಗಳು ಅಪ್ಪ ಕುಡುಗೋಲಿನಲ್ಲಿ ಕುಯ್ಯುತ್ತಿದ್ದ ಹಲಸಿನ ಹಣ್ಣನ್ನು ಮನೆಯವರೆಲ್ಲಾ ಕೈಗೆ ಎಣ್ಣೆಯನ್ನು ತಿಕ್ಕಿ ಹಣ್ಣನ್ನು ಬಿಡಿಸುತ್ತಿರುವಾಗ ಮಧ್ಯ ಮಧ್ಯದಲ್ಲಿ ಒಂದೊಂದು ತೊಳೆ ಹಣ್ಣನ್ನು ಬಾಯಿಗೆ ಹಾಕಿಕೊಂಡು ಸವಿಯುತ್ತಿದ್ದ ಆ ದಿನಗಳು.'

ಅಷ್ಟೇ! ಆ ಹಣ್ಣನ್ನು ಈ ಹಿಂದೆ ಅನುಭವಿಸಿದ್ದ ಸ್ವಾದ ನನ್ನ ನಾಲಿಗೆಯಲ್ಲಿ ಹಾಗೆ ಈಜುತ್ತಾ ಹೋದಂತಾಯಿತು. ಅದನ್ನು ನೆನೆದ ಮರುಕ್ಷಣ ಬಾಯಲ್ಲಿನ ಗ್ರಂಥಿಗಳು ಕಾರ್ಯಗತವಾಗಿ ಲಾಲಾರಸವನ್ನು ತಯಾರಿಸಿಬಿಟ್ಟವು. ಅದನ್ನು ಹಾಗೇ ನುಂಗಿಕೊಂಡು, ಆ… ಸ್ವಲ್ಪ ಫ್ರೆಷ್ ಆಗಿ ಬಂದು ನಿನ್ನ ನೋಡಿಕೊಳ್ಳುತ್ತೇನೆ ಅಂದುಕೊಂಡು ಅಪೂರ್ಣ ಮನಸ್ಸಿಂದ ರೂಮಿಗೆ ಹೋದೆ. ನೋಡಿ ಇಂತಹ ಅನುಭವ ನಿಮಗೂ ಆಗಿರಬಹುದು. ಪಕ್ಕದ ಮನೆಯಲ್ಲಿ ಬಿರಿಯಾನಿ ಮಾಡಿದಾಗಲೋ, ನೀವು ಬೇಕರಿಯನ್ನು ದಾಟುವಾಗ ಆಗತಾನೆ

ಬೇಯಿಸಿ ತಂದಿಟ್ಟ ತಿನಿಸುಗಳ ಸುವಾಸನೆ ನಿಮ್ಮ ಮೂಗಿಗೆ ಬಡಿದಾಗಲೋ. ಹೀಗೆ ಹಲವು ಸಂದರ್ಭಗಳಲ್ಲಿ ನಮಗೆ ಈ ಅನುಭವ ಆಗುತ್ತದೆ. ಆದರೆ ಇಲ್ಲಿ ನಾವು ಗಮನ ಹರಿಸಬೇಕಾದ ಇನ್ನೊಂದು ವಿಚಾರವಿದೆ. ನಾವು ಇಂತಹ ಸಂದರ್ಭಗಳಲ್ಲಿ ಕೇವಲ ಸುವಾಸನೆಯನ್ನು ಮಾತ್ರ ಸವಿಯುವುದಿಲ್ಲ, ಬದಲಿಗೆ ಆ ಸುವಾಸನೆಯ ಮೂಲವಾದ ತಿನಿಸುಗಳನ್ನು ತಿಂದ ಅನುಭವದ *ಸ್ವಾದವೂ(flavor)* ಕೂಡಾ ನಮಗೆ ಗೊತ್ತಿಲ್ಲದ ಹಾಗೆ ಅರಿವಾಗುತ್ತದೆ.

ಆಹ್ ಅದರಲ್ಲೇನಿದೆ ವಿಶೇಷ, ಎರೆಡೂ ಒಂದೇ ಅಲ್ಲವೇ? ಖಂಡಿತ ಅಲ್ಲ! ಸ್ವಾದಕ್ಕೂ, ಸುವಾಸನೆಗೂ ಹಾಗೂ ರುಚಿಗೂ ಸಂಬಂಧವಿದೆ. ಆದರೆ ಎಲ್ಲಾ ಒಂದೇ ಅಲ್ಲ. ನಿಮಗೆ ಸುಲಭವಾಗಿ ಹೇಳುವುದಾದರೆ,

*ಸ್ವಾದ (flavor) = ರುಚಿ (taste) + ಸುವಾಸನೆ (aroma)*

ಈ ವಿಚಾರ ಕೆಲವರಿಗೆ ಹಾ... ಇರಬಹುದು ಎಂದು ಒಪ್ಪುತ್ತರಾದರೂ ಕೆಲವರಿಗೆ ಅದು ಹೇಗೆ? ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕೆ ನಾವೇ ಗಮನಿಸಬಹುದಾದ ಒಂದು ಸಣ್ಣ ಪ್ರಯೋಗವಿದೆ. ಉದಾಹರಣೆಗೆ ನೀವು ಇಷ್ಟ ಪಟ್ಟು ತಿನ್ನುವ ಯಾವುದೋ ಒಂದು ತಿನಿಸನ್ನು ಉಸಿರಾಡದೆ ಕೇವಲ ಬಾಯಲ್ಲಿ ಜಗಿದು ತಿಂದು ನೋಡಿ. ನಂತರ ಹಾಗೆ ಜಗಿಯುವಾಗ ಉಸಿರಾಡುತ್ತಾ ತಿಂದು ನೋಡಿ. ಏನೋ ಒಂದು ವ್ಯತ್ಯಾಸ ಕಂಡುಬರುತ್ತದೆ. ಆ ವ್ಯತ್ಯಾಸವೇ ಸ್ವಾದ. ನಾವು ಬಾಯಲ್ಲಿ ಅಗೆಯುವಾಗ ಆಗುವ ಅನುಭವ 'ರುಚಿ' ಅದರಲ್ಲಿ ಉಪ್ಪು, ಹುಳಿ, ಖಾರ, ಸಿಹಿ ಮತ್ತು ಕಹಿ ಮಾತ್ರ ಅನುಭವವಾಗುತ್ತದೆ. ಜಗಿಯುವಾಗ ಉಸಿರಾಡಿದರೆ ಆ ತಿನಿಸಿನ ಸುವಾಸನೆಯನ್ನು ಮೂಗಿನ ಹಿಂಬದಿಯ ವಾಸನಾ ಗ್ರಾಹಕಗಳು ಅದನ್ನು ಗ್ರಹಿಸಿ ಮೆದುಳಿಗೆ ಕಳುಹಿಸುತ್ತವೆ. ಈ ರುಚಿಯ ಅನುಭವ ಹಾಗೂ ಸುವಾಸನೆಯ ಅನುಭವಗಳು ಮೆದುಳಿನ ಒಂದು ಭಾಗದಲ್ಲಿ ಸೇರಿ ಈ ತಿನಿಸಿಗೆ "ಇದೇ ಸ್ವಾದ" ಎಂದು ಶೇಖರಿಸಿ ನೆನಪಿಡುತ್ತದೆ. ನಂತರ ಅದೇ ತರಹದ ಸುವಾಸನೆ ಬಂದಲ್ಲಿ ಕೇವಲ ಆ ಸುವಾಸನೆಯಲ್ಲದೇ, ನಾವು ತಿಂದ ರುಚಿಯ ಅನುಭವ ಸೇರಿ ಸ್ವಾದದ ಅನುಭವ ಮೂಡುತ್ತದೆ.




***ಉದಾ:*** ಮಾವಿನ ಹಣ್ಣು ಮತ್ತು ಪೀಚ್ ಹಣ್ಣು ಎರೆಡೂ ರುಚಿಯಲ್ಲಿ ಸರಿಸುಮಾರು ಒಂದೇ ಆಗಿದೆ. ಆದರೆ ಅವುಗಳ ಬೇರೆ ಬೇರೆ ಸುವಾಸನೆ. ಆ ಹಣ್ಣುಗಳಿಗೆ ಬೇರೆ ಬೇರೆ ಸ್ವಾದವನ್ನು ನೀಡಿ ಪ್ರತ್ಯೇಕಿಸುತ್ತವೆ.



ಇದೇ ವಿಚಾರವನ್ನು ಈ ಹಿಂದೆ 2025ರಲ್ಲಿ ವಿಜ್ಞಾನಿಗಳು ಊಹಿಸಿದ್ದರಾದರೂ ನಿಖರವಾಗಿ ಈ ಸ್ವಾದ ಎಂಬ ಅನುಭವ ನಮ್ಮ ಮೆದುಳಿನಲ್ಲಿ ಎಲ್ಲಿ ಆಗುತ್ತದೆ ಎಂದು ತಿಳಿದಿರಲಿಲ್ಲ. ಇದನ್ನು ಕಂಡುಹಿಡಿಯಲೆಂದು *ಹೋರಿಸಂಟನೋ ಎಂಬ ನರವಿಜ್ಞಾನಿ ಮತ್ತು ತಂಡ,* 25 ವ್ಯಕ್ತಿಗಳನ್ನು ಬಳಸಿಕೊಂಡು ಪ್ರತಿಯೊಬ್ಬರಿಗೂ ವಿವಿಧ ಬಗೆಯ ತಿನಿಸುಗಳನ್ನು ಹೋಲುವ ತಾವೇ ತಯಾರಿಸಿದ ದ್ರಾವಣಗಳನ್ನು ಒಂದೊಂದಾಗಿ ಕೊಟ್ಟು ಸವಿಯಲು ಹೇಳಿದರು. ಹಾಗೆ ಸವಿಯುವಾಗ ಅವರ ಮೆದುಳಿನಲ್ಲಾಗುವ ಬದಲಾವಣೆಗಳನ್ನು 'ಮೆದುಳಿನ ಸ್ಕ್ಯಾನಿಂಗ್' ಮೂಲಕ ಪರೀಕ್ಷಿಸತೊಡಗಿದರು. ಅವರು ಕಲೆ ಹಾಕಿದ ಈ ವಿವಿಧ ಸ್ಕ್ಯಾನಿಂಗನ್ನು 'ಮಷಿನ್ ಲರ್ನಿಂಗ್' ಎಂಬ ಒಂದು ಬಗೆಯ A.I ಬಳಸಿ ಕಂಪ್ಯೂಟರಿನಲ್ಲಿ ಗಮನಿಸತೊಡಗಿದರು. ಇದರಿಂದ ಅವರ ಮೆದುಳಿನಲ್ಲಾಗುವ ಬದಲಾವಣೆಯನ್ನು ಗಮನಿಸುತ್ತಿದ್ದರು. ಕಂಪ್ಯೂಟರ್ ಗೆ ನೀಡುತ್ತಿದ್ದ ಮೆದುಳಿನ ಸ್ಕ್ಯಾನಿಂಗ್ ಮಾಹಿತಿಯನ್ನು ಬಳಸಿಕೊಂಡು, ಮಷಿನ್ ಲರ್ನಿಂಗ್ ಸಹಕಾರದಿಂದ ಒಬ್ಬ ವ್ಯಕ್ತಿಯ ಮೆದುಳಿನಲ್ಲಾಗುವ ಬದಲಾವಣೆಯಿಂದ, ಆತ ಏನನ್ನು ತಿಂದಿರಬಹುದು ಎಂದು ಊಹಿಸುವಷ್ಟು ಬುದ್ಧಿವಂತಿಕೆ ಕಂಪ್ಯೂಟರ್ ಗೆ ಬಂತು.




ಇದನ್ನೇ ಬಳಸಿಕೊಂಡು, ಪ್ರತೀ ಬಾರಿ ಒಬ್ಬ ವ್ಯಕ್ತಿ ಒಂದು ತಿನಿಸನ್ನು ತಿಂದಾಗ ಮೆದುಳಿನ ಯಾವ ಭಾಗದಲ್ಲಿ ಏನು ಬದಲಾವಣೆಯಾಗುತ್ತದೆ ಎಂದು ಹುಡುಕುತ್ತಾ ಹೋದರು. ಇದರ ಸತತ ಪ್ರಯತ್ನದಿಂದಾಗಿ, “ಇನ್ಸುಲಾ" ಎಂಬ ಮೆದುಳಿನ ಭಾಗದಲ್ಲಿ ಬದಲಾವಣೆಗಳು ಕಾಣುತ್ತಿವೆ ಎಂದು ಗುರುತಿಸಿದರು. ಇನ್ಸುಲಾ ಎಂಬ ಮೆದುಳಿನ ಭಾಗದಲ್ಲಿ ರುಚಿಯ ಅನುಭವ ಆಗುತ್ತದೆ, ಎಂದು ಇಲಿಗಳ ಮೇಲೆ 2017ರಲ್ಲಿ ನಡೆಸಿದ್ದ ಪ್ರಯೋಗದಲ್ಲಿ ತಿಳಿದು ಬಂದಿತ್ತಾದರೂ, ವಾಸನೆಯ ಅನುಭವವೂ ಆ ಇನ್ಸುಲಾ ಎಂಬ ಜಾಗದಲ್ಲೇ ಆಗಿ 'ಸ್ವಾದ' ಎಂಬ ಅನುಭವ ಆಗುತ್ತದೆ ಎಂದು ಹೋರಿಸಂಟನೋ ಈ ಪ್ರಯೋಗದಿಂದ ಕಂಡುಹಿಡಿದರು. ಇದೊಂದು ಮುಖ್ಯ ಸಂಶೋಧನೆಯೇ ಎಂದು ಹಲವು ವಿಜ್ಞಾನಿಗಳೂ ಸಹ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಮ್ಮದೇ ದೇಹದಲ್ಲಾಗುವ ರುಚಿ, ವಾಸನೆ, ಸ್ವಾದ ಎಂಬ ಅನುಭವಗಳನ್ನು ಅದು ಸರ್ವೇ ಸಾಮಾನ್ಯವೆಂದು ಲಘುವಾಗಿ ನೋಡುವ ನಾವು, ನಮ್ಮ ದೇಹದಲ್ಲೇ ಆಗುವ ಇಂತಹ ಸಾವಿರಾರು ಕಾರ್ಯಗಳು, ಅವುಗಳಲ್ಲಿ ಒಂದಕ್ಕೊಂದು ಇರುವ ಸಂಬಂಧಗಳು, ಅದನ್ನು ನಿಖರವಾಗಿ ನಡೆಸುವ ನಮ್ಮ ದೇಹದ ವ್ಯವಸ್ಥೆ... ಇದನ್ನೆಲ್ಲಾ ನಿಯಂತ್ರಿಸುವ ಮೆದುಳಿನ ಆ ಸಾಮರ್ಥ್ಯ. ಅಬ್ಬಾ... ತಿಳಿದುಕೊಳ್ಳುತ್ತಾ ಹೋದರೆ ನಮ್ಮದೇ ದೇಹ ಎಷ್ಟು ನಿಖರ, ನಿಗೂಢ, ವಿಚಿತ್ರ, ಆಶ್ಚರ್ಯಕರ ಹಾಗೂ ಅನುಭವಾತೀತ ಎಂದು ಅನಿಸುತ್ತದೆ.

**Source:** [www.snexplores.org](http://www.snexplores.org)



**ಲೇಖನ: ಜೈಕುಮಾರ್ ಆರ್.**

**ಬೆಂಗಳೂರು ನಗರ ಜಿಲ್ಲೆ**

# ಬೀಜಾವತಾರ

WCG
Wildlife Conservation Group

© ಹಯಾತ್ ಮೊಹಮ್ಮದ್

ಅಮ್ಮನ ಮಡಿಲಲಿ ಬೆಚ್ಚಗೆ ಇದ್ದೆ
ನಾನಾರೆಂದು ಗೊತ್ತಿರಲಿಲ್ಲ!
ಸುಖದ ಕಡಲಲಿ ಸುಮ್ಮನೆ ಇದ್ದೆ
ಆಗುಹೋಗುಗಳ
ಅರಿವಿರಲಿಲ್ಲ!!

ಬೀಜವು ನೀನು - ಹೊರಬರಬೇಕು
ಹೆಮ್ಮರವಾಗಿ ಬೆಳೆಯಲು ಬೇಕು!
ನೆರಳನು ಕೊಟ್ಟು ಹಣ್ಣನು ಹೆತ್ತು
ಉಪಕರಿಸುವ ನೂರ್ಕಾಲ ಬದುಕು!!

ಅವಳ ಮಾತದು, ಜಗದ ಸೊಬಗದು
ಮುಂದಾದದ್ದು ಸೋಜಿಗವು!
ಭೂಮಿಗೆ ಬಿದ್ದೆ, ಮಣ್ಣಲಿ ಇದ್ದೆ
ಮುಂಗಾರ ಮಳೆಗೆ ಮೊದಲೊಲವು!!

ಹನಿ ಹನಿ ಚುಂಬಿಸೆ ಮೈಯನು ತೊಯಿಸೆ,
ಚಿಗುರೊಡೆದೆ ನಾ ಎಲೆಗರೆದು!
ಬೇರನು ಇಳಿಸಿ ಮೇಲಕೆ ಇಣುಕಿದೆ,
ಸೂರ್ಯನ ಬೆಳಕಿಗೆ ಹಾತೊರೆದು!!

ಮೆಲ್ಲ ಮೆಲ್ಲನೆ ತಿಂಗಳ ಜೊತೆಗೆ
ರೆಂಬೆಯ ಚಾಚುತ ನಾ ಬೆಳೆದೆ!
ಕಣ್ಣಾದೆನು ನಾ ಕಾಲದ ಕಥೆಗೆ
ಹೊಸ ತಲೆಮಾರುಗಳನ್ನು ಸೇರಿಸಿದೆ!!

ಅಮ್ಮನ ಒಡಲಲಿ ಬೆಚ್ಚಗೆ ಇದ್ದೆ,
ನಾನಾರೆಂದು ಗೊತ್ತಿರಲಿಲ್ಲ!
ಪುಟ್ಟ ಬೀಜವೆ ನಾನಾಗಿದ್ದೆ,
ಹೆಮ್ಮರ ಇಂದು- ಎದುರಿಲ್ಲ!!

ಅರಿತೆನು ನಾನು -
ಹೇಳುವೆ ನಿಮಗೆ,
ಸರಿಯೆನಿಸಿದರೆ
ಜೊತೆಬನ್ನಿ!
ತಿಳಿದಿದ್ದನ್ನು ಕಡೆಯುವ ಬನ್ನಿ,
ಪಡೆಯುವ ಅರಿವಿನ ನವನೀತ!!

ನೆನ್ನೆಯ ಹೆಜ್ಜೆಗೆ ಇಂದಿನ ಹೆಜ್ಜೆಯ,
ಸೇರಿಸೆ ಪಯಣವು ಪರಂಪರೆ!
ಇಂದು - ನಾಳೆಗಳ, ಬೆಸೆಯುತ ನೇಯ್ದರೆ,
ಹರಸಿ ನಲಿಯುವಳು ವಸುಂಧರೆ!!

ಕೆ. ಎಸ್. ಸುಮಂತ್ ಭಾರದ್ವಾಜ್
ರಾಮನಗರ ಜಿಲ್ಲೆ

# ಪ್ರಕೃತಿ ಬಿಂಬ



**ನೀಲಿ ಕುಪ್ಪಿ** © ಅನಿಲ್ ಕುಮಾರ್ ಎನ್. ಆರ್.

ಪೂರ್ವ, ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಎಲೆ ಉದುರುವ ಕಾಡು ಮತ್ತು ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ನೀಲಿ ಕುಪ್ಪಿ ಚಿಟ್ಟೆಯು ಪ್ಯಾಪಿಲಿಯೊನಿಡೆ (Papilionidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಗ್ರ್ಯಾಫಿಯಂ ಸಾರ್ಪೆಡಾನ್ (Graphium sarpedon) ಎಂದು ಕರೆಯಲಾಗುತ್ತದೆ. ಕೆಳಗಿನ ಮತ್ತು ಮೇಲಿನ ರೆಕ್ಕೆಗಳು ಕಪ್ಪಾಗಿದ್ದು, ತಳದ ಹೊರಭಾಗದಲ್ಲಿ ಉದ್ದವಾದ ನೀಲಿ ಪಟ್ಟೆಯಿರುತ್ತದೆ ಮತ್ತು ಅದರ ಸುತ್ತ ಕೆಲವು ಕೆಂಪು ಬಣ್ಣದ ಮಚ್ಚೆಗಳಿರುತ್ತವೆ. ಅಂಚಿನಲ್ಲಿ ಅರ್ಧ ಚಂದ್ರಾಕೃತಿಯ ನೀಲಿ ಮಿಶ್ರಿತ ಹಸಿರು ಮಚ್ಚೆಗಳಿರುತ್ತವೆ. ವೇಗವಾಗಿ ಹಾರಾಡುತ್ತವೆ ಮತ್ತು ತೇವಾಂಶವಿರುವ ಮಣ್ಣಿನ ಮೇಲೆ ಗುಂಪುಗುಂಪಾಗಿ ಕಂಡು ಬರುತ್ತವೆ. ಲಾರೇಸಿ (Lauraceae) ಕುಟುಂಬದ ಕಾಡು ದಾಲ್ಚಿನ್ನಿ ಹಾಗೂ ಕರ್ಪೂರದ ಮರದ ಜಾತಿಗೆ ಸೇರಿದ ವಿವಿಧ ಮರಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.



**ಕಪಿಲ** © ಅನಿಲ್ ಕುಮಾರ್ ಎನ್. ಆರ್.

ಆಗ್ನೇಯ ಏಷ್ಯಾ ಮತ್ತು ಉತ್ತರ ಆಸ್ಟ್ರೇಲಿಯಾದ ವಿವಿಧ ಭಾಗಗಳಲ್ಲಿನ, ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು ಹಾಗೂ ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಕಪಿಲ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಅಕ್ರೇಯಾ ಟೆರ್ಪ್ಸಿಕೋರ್ (Acraea terpsicore) ಎಂದು ಕರೆಯಲಾಗುತ್ತದೆ. ರೆಕ್ಕೆಗಳು ಕಿತ್ತಳೆ ಬಣ್ಣವಿದ್ದು, ಅಲ್ಲಲ್ಲಿ ಕಪ್ಪು ಚುಕ್ಕೆಗಳಿರುತ್ತವೆ. ಕೆಳಗಿನ ರೆಕ್ಕೆಯ ಹಿಂಭಾಗದ ಅಂಚಿನಲ್ಲಿ ಕಪ್ಪು ವರ್ತುಲವಿರುವ ಬಿಳಿ ಮಚ್ಚೆಗಳಿರುತ್ತವೆ. ಹೂಗಳ ಮೇಲೆ ಹೆಚ್ಚಾಗಿ ಕಾಣಸಿಗುವ ಇವುಗಳು ಪರಭಕ್ಷಕರಿಗೆ ವಿಷಕಾರಿಯಾಗಿವೆ. ಪಾಸಿಫ್ಲೋರೇಸಿ (Passifloraceae) ಕುಟುಂಬದ ಜ್ಯೂಸ್ ಹಣ್ಣು (passion fruit) ಜಾತಿಯ ವಿವಿಧ ಗಿಡಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.



**ಬೆಳ್ಳಿಗೆರೆ** © ಅನಿಲ್ ಕುಮಾರ್ ಎನ್. ಆರ್.

ಏಷ್ಯಾದ ವಿವಿಧ ಭಾಗಗಳಲ್ಲಿನ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು ಹಾಗೂ ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಬೆಳ್ಳಿಗೆರೆ ಚಿಟ್ಟೆಯು ಲೈಕೇನಿಡೆ (Lycaenidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸಿಗರೈಟಿಸ್ ವಲ್ಕನಸ್ (Cigaritis vulcanus) ಎಂದು ಕರೆಯಲಾಗುತ್ತದೆ. ರೆಕ್ಕೆಗಳ ಹಿಂಭಾಗದಲ್ಲಿ ಬೆಳ್ಳಿಗೆರೆವುಳ್ಳ ನಾಲ್ಕು ಉದ್ದವಾದ ಕೆಂಪು ಬಣ್ಣದ ಪಟ್ಟಿಗಳಿರುತ್ತವೆ. ಉಳಿದಂತೆ ಬಿಳಿಯ ಬಣ್ಣ ಹೊಂದಿರುತ್ತವೆ. ಕೆಳಗಿನ ರೆಕ್ಕೆ ಎರಡು ಬಾಲಗಳನ್ನು ಹೊಂದಿರುತ್ತದೆ. ಪೊದೆಗಳಲ್ಲಿ ವೇಗದ ಹಾರಾಟಮಾಡುತ್ತದೆ. ತೇವಾಂಶವಿರುವ ಮಣ್ಣು ಹಾಗೂ ಪಕ್ಷಿಗಳ ಮಲದ ಮೇಲೆ ಕೂರುತ್ತದೆ. ಅಪೊಸಿನಾನ್ಸಿಯೇ (Apocynanceae) ಕುಟುಂಬದ ಕವಳಿ ಹೆಣ್ಣಿನ ಗಿಡ, ಕ್ಯಾಪರೇಸೀ (Capparaceae) ಕುಟುಂಬದ ಮರಗಾಡೆ ಗಿಡ, ಫ್ಯಾಬೇಸಿ (Fabaceae) ಕುಟುಂಬದ ಕುಕ್ಕೆ ಗಿಡ, ರುಬಿಯೇಸಿ (Rubiaceae) ಕುಟುಂಬದ ಕಾರೆಮುಳ್ಳು ಗಿಡ, ಸಪಿಂಡೇಸಿ (Sapindaceae) ಕುಟುಂಬದ ಕಸಬಳ್ಳಿ ಗಿಡ ಇತ್ಯಾದಿಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.



**ನೀಲಿ ಹುಲಿ** © ಅನಿಲ್ ಕುಮಾರ್ ಎನ್. ಆರ್.

ದಕ್ಷಿಣ ಮತ್ತು ದಕ್ಷಿಣ ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು ಹಾಗೂ ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ನೀಲಿ ಹುಲಿ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ತಿರುಮಲ ಲಿಮ್ನಿಯಾಸ್ (Tirumala limniace) ಎಂದು ಕರೆಯಲಾಗುತ್ತದೆ. ರೆಕ್ಕೆಗಳ ಮುಂಭಾಗವು ಕಡು ಕಂದು ಅಥವಾ ಕಪ್ಪು ಬಣ್ಣವಿದ್ದು, ಅರೆ ಪಾರದರ್ಶಕವಾದ ಬಿಳಿ ಮಿಶ್ರಿತ ನೀಲಿ ಬಣ್ಣದ ಚುಕ್ಕೆಗಳು ಹಾಗೂ ಗೆರೆಗಳನ್ನು ಹೊಂದಿರುತ್ತದೆ. ಹಿಂಭಾಗವು ಇದೇ ರೀತಿ ಇದ್ದು ಕೊಂಚ ತೆಳು ಬಣ್ಣದ್ದಾಗಿರುತ್ತದೆ. ಈ ಚಿಟ್ಟೆಗಳು ಮಳೆಗಾಲದಲ್ಲಿ ಪಶ್ಚಿಮ ಘಟ್ಟದಿಂದ ಪೂರ್ವ ಘಟ್ಟಗಳೆಡೆ, ಚಳಿಗಾಲದಲ್ಲಿ ಪೂರ್ವ ಘಟ್ಟಗಳಿಂದ ಪಶ್ಚಿಮ ಘಟ್ಟಗಳೆಡೆ ವಲಸೆ ಹೋಗುವುದನ್ನು ಕಾಣಬಹುದು. ಪೊಯೇಸೀ (Poaceae) ಕುಟುಂಬದ ಕಬ್ಬಿನ ಗಿಡ, ಅಪೊಸಿನೇಸಿ (Apocynaceae) ಕುಟುಂಬದ ಎಕ್ಕದ ಗಿಡ, ಬುಗುಡಿ ಬಳ್ಳಿ, ಮೇಣದ ಬಳ್ಳಿ ಇತ್ಯಾದಿಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.

**ಚಿತ್ರ: ಅನಿಲ್ ಕುಮಾರ್ ಎನ್. ಆರ್.**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ತುಂಬ ಸೂಕ್ಷ್ಮವಾಗಿ ಗಮನಿಸಿದರೆ, ಚಿಂಪಾಂಜಿಗಳಲ್ಲಿ ಮನುಷ್ಯರನ್ನು ಹೋಲುವ ಅನೇಕ ಲಕ್ಷಣಗಳನ್ನು ಕಾಣಬಹುದು. ಶತ್ರುಗಳನ್ನು ಬೆದರಿಸಲು ಅವುಗಳು ಕಲ್ಲುಗಳನ್ನು ಎಸೆಯುವುದು, ಕೋಲುಗಳನ್ನು ಬಳಸುವುದು ಗಮನಾರ್ಹ. ಗಟ್ಟಿ ಕಾಯಿಗಳೊಳಗಿನ ಬೀಜಗಳನ್ನು ಬಿಡಿಸಲು ಕಲ್ಲಿನಿಂದ ಕುಟ್ಟುವುದು, ಹುತ್ತದೊಳಗಿನ ಗೆದ್ದಲುಗಳನ್ನು ಉದ್ದದ ಕಡ್ಡಿಯ ಸಹಾಯದಿಂದ ಹಿಡಿದು ತಿನ್ನುವುದು—ಇವುಗಳ ಬುದ್ಧಿವಂತಿಕೆಯನ್ನು ತೋರಿಸುತ್ತವೆ.

ಚಿಂಪಾಂಜಿಗಳು ಮಿಶ್ರಾಹಾರಿಗಳಾಗಿದ್ದರೂ, ಅವುಗಳ ಆಹಾರದಲ್ಲಿ ಮುಖ್ಯವಾಗಿ ಸೊಪ್ಪುಗಳು, ಹೂವುಗಳು, ಕಾಯಿಗಳು, ಹಣ್ಣುಗಳು ಹಾಗೂ ಬೀಜಗಳು ಸೇರಿರುತ್ತವೆ. ಸುಮಾರು ಮುನ್ನೂರು ಬಗೆಯ ಸಸ್ಯಾಹಾರಗಳನ್ನು ಅವು ಸೇವಿಸುತ್ತವೆ ಎನ್ನುವುದು ಗಮನಾರ್ಹ.

ಚಿಂಪಾಂಜಿಗಳು 'ಫಿಷನ್–ಫ್ಯೂಷನ್' ಮಾದರಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುತ್ತವೆ. ಒಂದೇ ಸಮುದಾಯದಲ್ಲಿ ಸಾಮಾನ್ಯವಾಗಿ 20 ರಿಂದ 150 ಸದಸ್ಯರು ಇರಬಹುದು; ಆದರೆ ಅವುಗಳು ದಿನನಿತ್ಯ ಸಣ್ಣ ಗುಂಪುಗಳಾಗಿ ವಿಭಜನೆಗೊಂಡು ಸಂಚರಿಸುತ್ತವೆ.

ಹಿಂದೆ ಅವುಗಳ ನೈಸರ್ಗಿಕ ಆವಾಸಗಳಲ್ಲಿ ಭಾರೀ ಸಂಖ್ಯೆಯಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದವು. ಆದರೆ ಇತ್ತೀಚಿನ ದಶಕಗಳಲ್ಲಿ ಅವುಗಳ ಸಂಖ್ಯೆ ವೇಗವಾಗಿ ಕಡಿಮೆಯಾಗುತ್ತಿದೆ. ತಜ್ಞರ ಅಂದಾಜಿನ ಪ್ರಕಾರ, ಈಗ ವಿಶ್ವದಲ್ಲಿ ಚಿಂಪಾಂಜಿಗಳ ಒಟ್ಟು ಸಂಖ್ಯೆ ಸುಮಾರು 1.7 ಲಕ್ಷದಿಂದ 3 ಲಕ್ಷದ ನಡುವೆಯಿದೆ.

ಅರಣ್ಯ ನಾಶ, ಮಾಂಸಕ್ಕಾಗಿ ನಡೆಯುತ್ತಿರುವ ಕಳ್ಳ ಬೇಟೆ ಮುಂತಾದ ಮಾನವ ಚಟುವಟಿಕೆಗಳು ಚಿಂಪಾಂಜಿಗಳನ್ನು ಅಳಿವಿನ ಅಂಚಿಗೆ ತಳ್ಳಿವೆ. ಈ ಹಿನ್ನೆಲೆಯಲ್ಲೇ, ಜುಲೈ 14ನ್ನು **"ವಿಶ್ವ ಚಿಂಪಾಂಜಿ ದಿನ"** ವೆಂದು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್: 560083. ಗೆ ಕಳಿಸಿಕೊಡಬಹುದು.